IT



## PART – I

## ಭಾಷೆ – I

## ಕನ್ನಡ

**ಸೂಚನೆ :** ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿರಿ.

ಅನಂತರಾವ್ ಒಂದು ದೊಡ್ಡ ಔದ್ಯಮಿಕ ಸಂಸ್ಥೆಯಲ್ಲಿ ಸಹಾಯಕ ಮ್ಯಾನೇಜರ್ ಆಗಿ ಕೆಲಸ ಮಾಡಿದವರು. ಅವರು ಒಳ್ಳೆಯ ಕೆಲಸಗಾರರೆಂದೂ, ಹಿರಿಯರಿಗೆ ವಿಧೇಯರೆಂದೂ ಹೆಸರು ಪಡೆದವರು. ಜನಪ್ರಿಯತೆ ಜನಾದರಣೆ ಪಡೆದ ಆ ವ್ಯಕ್ತಿಯೇ ಬಡ್ತಿಯಾಗಿ ಇದೀಗ ಮ್ಯಾನೇಜರ್ ಆಗಿ ನೇಮಕಗೊಂಡಿದ್ದಾರೆ. ಅವರ ಕೈ ಕೆಳಗೆ ಸುಮಾರು ಮುನ್ನೂರು ಮಂದಿ ಸಹಾಯಕರೂ ಸಿಬ್ಬಂದಿ ವರ್ಗದವರೂ ಇದ್ದಾರೆ. ಅವರು ಮ್ಯಾನೇಜರ್ ಸ್ಥಾನವನ್ನು ಅಲಂಕರಿಸಿ ಸುಮಾರು ಹದಿನೈದು ದಿನಗಳಾಗಿವೆಯಷ್ಟೆ. ಹೃದಯದ ಅತಿಯಾದ ಬಡಿತ, ಭಯಸಂಕಟಗಳಿಂದ ರಾತ್ರಿಯಲ್ಲಿ ಗಂಟೆಗಳ ಕಾಲ ಎಚ್ಚೆತ್ತು ಸುಮ್ಮನೆ ಕುಳಿತಿರುತ್ತಾರೆ.

ಡಾಕ್ಟರರನ್ನು ಕಂಡು ಮಾತನಾಡಿದಾಗ ತಿಳಿದುಬಂದ ಸಂಗತಿ ಇದು : ಮ್ಯಾನೇಜರ್ ಆಗಿ ಜವಾಬ್ದಾರಿ ಸ್ಥಾನದ ಕಾರ್ಯನಿರ್ವಹಣೆ ಅವರಿಗೆ ದೊಡ್ಡ ಭಾರವೆನಿಸಿದೆ. ಸಮಸ್ಯೆಗಳಿಗೆ ಪರಿಹಾರ ನಿಷ್ಕರ್ಷೆ ಮಾಡುವಾಗ, ಕೆಲವೊಂದು ಕಾರ್ಯನೀತಿ ನಿರ್ಧರಿಸುವಾಗ, ಸಹಾಯಕರ ತರ್ಕಕುತರ್ಕಗಳನ್ನು ಎದುರಿಸುವಾಗ, ಅವರಿಗೆ ವಿಪರೀತ ಬೇಸರ ಬಳಲಿಕೆಯಾಗುತ್ತದೆ. ಕಿರಿಯರು ತನ್ನ ತೀರ್ಮಾನಗಳನ್ನು ಒಪ್ಪುವಂತೆ ಮಾಡಿ ಅವರು ಸರಾಗವಾಗಿ ಕೆಲಸ ಮಾಡುವಂತೆ ಪ್ರೇರೇಪಿಸಲು ಸಾಧ್ಯವಾಗುತ್ತಿಲ್ಲ. ಆದರೆ ಎದೆ ಬಡಿತ ನಿದ್ರಾಹೀನತೆಗಳು ಮಾನಸಿಕ ತಳಮಳದಿಂದ ಎಂಬುದನ್ನು ಅವರು ಒಪ್ಪುತ್ತಿಲ್ಲ. ತಜ್ಞರ ಅಭಿಪ್ರಾಯದ ಪ್ರಕಾರ ಅದು ಮಾನಸಿಕ ಮೂಲವಾದ ತೊಂದರೆಯೇ.

ಅಂತೂ ತಜ್ಞರ ಸಲಹೆಯಂತೆ ಅವರು ಕೆಲಕಾಲ ರಜೆ ತೆಗೆದುಕೊಂಡರು. ಅದೃಷ್ಟವಶಾತ್ ಅವರು ರಜೆಯ ಮೇಲಿದ್ದಾಗ ಇನ್ನೊಬ್ಬ ದಕ್ಷ ಸಹಾಯಕ ಆಫೀಸರ್ ಅವರ ಕೆಲಸವನ್ನು ನಿರ್ವಹಿಸಿದರು. ಮ್ಯಾನೇಜರ್ ರಜೆಯಿಂದ ಹಿಂದಿರುಗಿದ ಮೇಲೆ ಈ ನೂತನ ಆಫೀಸರ್ ಮ್ಯಾನೇಜರಿಗೆ ಅಸಾಧ್ಯವೆನಿಸಿದ ಜವಾಬ್ದಾರಿಯ ನಿರ್ವಹಣೆಗಳನ್ನು ದಕ್ಷತೆಯಿಂದ ತಾನೇ ನೆರವೇರಿಸಿ ಅವರ ತಲೆಭಾರ ಕಡಿಮೆ ಮಾಡಿದ ಪರಿಣಾಮವಾಗಿ ಮ್ಯಾನೇಜರ್ ಆ ಬಳಿಕ ಹೃದಯದ ಅತಿ ಬಡಿತ, ನಿದ್ರಾಹೀನತೆ ಮೊದಲಾದ ತೊಂದರೆಗಳಿಂದ ಮುಕ್ತರಾದರು. ಡಾ. ಅಲೆಕ್ಸಿಸ್ ಕೆರೆಲ್‌ರ ಮಾತು – "ಚಿಂತೆಯನ್ನು ದೂರಕ್ಕೆಸೆಯಲರಿಯದ ವ್ಯಾಪಾರೋದ್ಯಮಿಗಳು ಯೌವನದಲ್ಲೇ ಸಾವನ್ನಪ್ಪುತ್ತಾರೆ" – ಅದೆಷ್ಟು ಅರ್ಥಗರ್ಭಿತ!"

1. ದಕ್ಷ ಸಹಾಯಕ ಆಫೀಸರ್‌ರವರ ಆಗಮನಕ್ಕೆ ಕಾರಣ :
   (1) ಅನಂತರಾವ್‌ರವರಿಗೆ ವರ್ಗಾವಣೆಯಾದ ಕಾರಣ
   (2) ಕೆಲಸ ಖಾಲಿಯಿದ್ದ ಕಾರಣ
   (3) ತಜ್ಞರು ಸಲಹೆ ನೀಡಿದ್ದ ಕಾರಣ
   (4) ✓ ಅನಂತರಾವ್‌ರವರ ರಜೆ ಹಿನ್ನೆಲೆ

2. ಅನಂತರಾವ್‌ರವರ ಪ್ರಕಾರ "ಕಾರ್ಯಭಾರ" ಎಂಬುದು :
   (1) ಅತಿಸುಲಭ
   (2) ಜವಾಬ್ದಾರಿ
   (3) ದಕ್ಷತೆ
   (4) ✓ ತಲೆಭಾರ

3. "ಕಾರ್ಯ" ಎಂಬ ತತ್ಸಮ ಪದಕ್ಕೆ ತದ್ಭವ ರೂಪ :
   (1) ಕಾಯ
   (2) ✓ ಕಜ್ಜ
   (3) ಕಾಯಕ
   (4) ಕಚ್ಚ



(NOTE : OFFICIAL KEY ANSWERS HAVE BEEN ATTACHED AT LAST PAGE FOR YOUR CONFIRMATION)



REDMI NOTE 6 PRO
MI DUAL CAMERA

Use E-Papers, Save Trees

IT



4. "ಚಿಂತೆಯನ್ನು ದೂರಕ್ಕೆಸೆಯಲರಿಯದ ವ್ಯಾಪಾರೋದ್ಯಮಿಗಳು ಯೌವನದಲ್ಲೇ ಸಾವನ್ನಪ್ಪುತ್ತಾರೆ" – ಈ ಮಾತಿನ ಸಾಂದರ್ಭಿಕ ಅರ್ಥ :

(1) ಧೃತಿಗೆಡದೆ ಧೈರ್ಯದಿಂದ ಮುನ್ನುಗ್ಗಬೇಕು
(2) ಚಿಂತೆಯನ್ನು ಮುಂದೂಡಬೇಕು
(3) ಚಿಂತೆ ಬಿಡದವನು ಯೌವನದಲ್ಲೇ ಸಾಯುತ್ತಾನೆ
(4) ವ್ಯಾಪಾರೋದ್ಯಮಿಗಳು ಮೊದಲು ಚಿಂತೆ ಬಿಡಬೇಕು

5. ಅಧಿಕಾರ ಸ್ವೀಕರಿಸಿದ ಹದಿನೈದು ದಿನಗಳಲ್ಲಿ ಅನಂತರಾವ್‌ರವರಲ್ಲಾದ ಬದಲಾವಣೆ :

(1) ಜನಪ್ರಿಯತೆ, ಜನಾದರಣೆ ಗಳಿಕೆ
(2) ಒಳ್ಳೆಯ ಕೆಲಸಗಾರ ಎಂಬ ಹೆಗ್ಗಳಿಕೆ
(3) ಹೃದಯದ ಅತಿಯಾದ ಬಡಿತ, ನಿದ್ರಾಹೀನತೆ
(4) ದಕ್ಷ ಆಫೀಸರ್ ಎಂಬ ಹೊಗಳಿಕೆ

6. "ರಜೆಯಲ್ಲಿ" ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ :

(1) ಪ್ರಥಮಾ ವಿಭಕ್ತಿ
(2) ತೃತೀಯಾ ವಿಭಕ್ತಿ
(3) ಪಂಚಮೀ ವಿಭಕ್ತಿ
(4) ಸಪ್ತಮೀ ವಿಭಕ್ತಿ

7. ಅನಂತರಾವ್‌ರವರ ಬೇಸರ ಬಳಲಿಕೆಗೆ ಕಾರಣ :

(1) ದೊಡ್ಡ ಅಧಿಕಾರದ ಜವಾಬ್ದಾರಿ
(2) ಸಹಾಯಕರ ತರ್ಕಕುತರ್ಕಗಳನ್ನು ಎದುರಿಸುವುದು
(3) ಮಕ್ಕಳು ಹೇಳಿದ ಮಾತನ್ನು ಕೇಳದೆ ಇರುವುದು
(4) ಅವರ ಅನಾರೋಗ್ಯ

8. ಅನಂತರಾವ್‌ರವರಿಗೆ ಒಂದು ದೊಡ್ಡ ಔದ್ಯಮಿಕ ಸಂಸ್ಥೆಯಲ್ಲಿ ಬಡ್ತಿಯಾಗಿ ನೇಮಕಗೊಂಡಿರುವುದು ಈ ಹುದ್ದೆಗೆ :

(1) ದೊಡ್ಡ ಉದ್ಯಮಿ
(2) ಸಹಾಯಕ ಆಫೀಸರು
(3) ಮ್ಯಾನೇಜರ್
(4) ಸಹಾಯಕ ಮ್ಯಾನೇಜರ್

**ಸೂಚನೆ : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9 ರಿಂದ 15 ಪ್ರಶ್ನೆಗಳಿಗೆ ಉತ್ತರಿಸಿರಿ.**

ಸಿರಿವಸಂತದ ಚೆಲುವು ಕಳೆಗುಂದಿತು;
ಉರಿಬಿಸಿಲು ನಿಟ್ಟುಸಿರ ಕದ ತೆರೆಯಿತು;
ಬಿಸಿಗಾಳಿ ಬೀದಿಯಲಿ ಸಂಚರಿಸಿತು;
ಜ್ಯೇಷ್ಠ ಆಷಾಢ – ಗ್ರೀಷ್ಮ ಋತು.
ಬೇಸಗೆಯಲಿ ನಡುಹಗಲಿನ ಬಿಸಿಯುಸಿರಿಗೆ ಬಳಲಿ
ಗಿಡದಲ್ಲಿಯೆ ಬರಿದಾಗಿದೆ ದಳವಿರದ ಗುಲಾಬಿ ;
ಕೆರೆಯೊಣಗಿದೆ ಕೆಸರಾಗಿದೆ ; ಕಂಗೆಟ್ಟಿವೆ ಮೀನು ;
ಮಾತಾಡದೆ ನೋಡುತ್ತಿದೆ ತುಟಿಯಿಲ್ಲದ ಬಾನು.
ದನಕರುಗಳು ತಲೆಯೆತ್ತಿವೆ ಮೇವಿಗೆ ಎಲ್ಲೆಲ್ಲು ;
ಬರಿಗಾಳಿಗೆ ತಲೆ ಹಾಸಿದೆ ಹಸಿರಿಲ್ಲದ ಹುಲ್ಲು ;
ಗಿಳಿ ಕೋಗಿಲೆ ಹಾಡಿದರೂ ತಲೆದೂಗದ ಬಾಳು ;
ಬಂಡೆಯ ಹಣೆಗೇರುತ್ತಿದೆ ಬಂಡಿಯ ಕೆಂಧೂಳು.



Use E-Papers, Save Trees

IT



ಬತ್ತಿದ ಹೊಳೆ ; ಅದರಾಚೆಗೆ ತಿರುಗುತ್ತಿದೆ ಗಾಣ ;
ಮೇಲೆತ್ತಿದ ಚಾಟಿಯಲಿದೆ ಮುದಿಯೆತ್ತಿನ ಪ್ರಾಣ ;
ನಡುಬೇಸಗೆ ಹಗಲಾಗಿದೆ ಬಿಸಿಲಿನ ಅಸಿಧಾರೆ ;
ಇರುಳುದ್ದಕು ನೇಯುತ್ತಿದೆ ಬರಿಗನಸಿನ ಸೀರೆ.

ಜನಜೀವನ ಸಾಗುತ್ತಿದೆ ಉರಿಬಿಸಿಲನು ತಾಳಿ ;
ವೀಣೆಯ ದನಿಯಾಳದಲೂ ಮದ್ದಳೆಯನು ಕೇಳಿ.
ಕರುಣೆಯ ಮಾತಾಡುವರೇ ಎಲ್ಲರು ಎಲ್ಲೆಲ್ಲು !
ಎಲೆಯುದುರಿದ ಮರವಿದ್ದರೆ ಅದರಡಿಯಲೆ ನಿಲ್ಲು !

9. ದನಕರುಗಳು ಎಲ್ಲೆಲ್ಲು ತಲೆಎತ್ತಿ ಬವಣೆ ಪಡುತ್ತಿರುವುದು :

(1) ಉರಿಬಿಸಿಲಿಗೆ
(2) ಹಸಿರಿಲ್ಲದ ಹುಲ್ಲಿಗಾಗಿ
(3) ಮಳೆಯ ಆಗಮನಕ್ಕಾಗಿ
(4) ಮೇವಿಗಾಗಿ

10. ಉರಿಬಿಸಿಲನ್ನು ತಾಳಿ ಸಾಗುತ್ತಿರುವುದು :

(1) ಗಿಳಿಕೋಗಿಲೆಗಳ ಜೀವನ
(2) ಜನರ ಜೀವನ
(3) ಮುದಿಯೆತ್ತಿನ ಪಯಣ
(4) ಬದುಕಿನ ಬವಣೆ

11. ಬೇಸಿಗೆಯ ಉರಿಬಿಸಿಲಿನ ತಾಪಕ್ಕೆ ಸಿಲುಕಿ ಬಳಲಿದ ದಳವಿಲ್ಲದ ಗುಲಾಬಿಯ ಸ್ಥಿತಿ :

(1) ಎಲೆಗಳೆಲ್ಲ ಉದುರಿ ಹೋಗಿವೆ
(2) ಗಿಡವೆಲ್ಲ ಒಣಗಿ ಹೋಗಿವೆ
(3) ದಳಗಳು ಒಣಗಿ ಹೋಗಿವೆ
(4) ಗಿಡದಲ್ಲಿಯೆ ಬರಿದಾಗಿದೆ

12. ಸಿರಿವಸಂತದ ಚೆಲುವು ಕಳೆಗುಂದಿತು :
ಉರಿಬಿಸಿಲು ನಿಟ್ಟುಸಿರ ಕದ ತೆರೆಯಿತು – ಈ ಕಾಲದ ಸೂಚನೆ :

(1) ವಸಂತ
(2) ಗ್ರೀಷ್ಮ
(3) ವರ್ಷ
(4) ಶರತ್

13. ಬಂಡಿಯ ಕೆಂಧೂಳು ಬಡಿಯುತಿರುವುದು :

(1) ಬಂಡೆಯ ಹಣೆಗೆ
(2) ಗಿಡ ಮರಗಳಿಗೆ
(3) ದನ ಕರುಗಳಿಗೆ
(4) ಪ್ರಾಣಿ ಪಕ್ಷಿಗಳಿಗೆ




Use E-Papers, Save Trees

IT



14. "ದನಕರುಗಳು" ಎಂಬ ಪದ ಈ ಸಮಾಸವನ್ನು ಸೂಚಿಸುತ್ತದೆ :
(1) ಕ್ರಿಯಾ ಸಮಾಸ
(2) ದ್ವಂದ್ವ ಸಮಾಸ
(3) ಅಂಶಿ ಸಮಾಸ
(4) ತತ್ಪುರುಷ ಸಮಾಸ

15. ಈ ಪದ್ಯಭಾಗದಲ್ಲಿ ಕವಿಯು ಬಳಸಿರುವ ಪ್ರಾಸ :
(1) ಆದಿಪ್ರಾಸ
(2) ಛೇಕಾನುಪ್ರಾಸ
(3) ಅನುಪ್ರಾಸ
(4) ಅಂತ್ಯಪ್ರಾಸ

16. ಭಾಷೆಯ ಪ್ರಾವೀಣ್ಯತೆ ಎಂದರೆ :
(1) ಭಾಷೆಯ ಹೊಸ ಹೊಸ ಪದಗಳ ಸಂಯೋಜನೆ
(2) ಒಂದೇ ವಿಷಯವನ್ನು ಹಲವು ರೀತಿಯಲ್ಲಿ ಹೇಳುವುದು
(3) ಒಂದೇ ಅರ್ಥವನ್ನು ಹೇಳುವ ಪದಗಳು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆಯದಾಗಿರುವುದು
(4) ಭಾಷಾ ಕೌಶಲಗಳಲ್ಲಿ ಪ್ರಬುದ್ಧತೆ ಪಡೆಯುವುದು

17. ಭಾಷಾ ಬೋಧನೆಯಲ್ಲಿ ಪದಮಾಲಾ ಪದ್ಧತಿ ಎಂದರೆ :
(1) ಪದಗಳನ್ನು, ಪದಗಳ ಉಚ್ಚಾರಣೆ ಮತ್ತು ಅರ್ಥವನ್ನು ತಿಳಿಸಿ ಕೊಡುವುದರ ಮೂಲಕ ಓದು ಕಲಿಸುವುದು
(2) ಪದ ಪದಬಂಧಗಳಿಂದ ಕೂಡಿದ ವಾಕ್ಯಗಳ ಸಾಲು
(3) ಪ್ರತಿ ವರ್ಣಗಳ ಸೂಕ್ತವಾದ ಬಳಕೆ ಮತ್ತು ಪ್ರಯೋಗಿಸುವ ವಿಧಾನ
(4) ಪದಗಳನ್ನು ಸ್ಪಷ್ಟವಾಗಿ ಹಂತ ಹಂತವಾಗಿ ತಿಳಿಸಿ ಕೊಡುವ ವಿಧಾನ

18. ಇದು ಭಾಷೆಯ ಸ್ವರೂಪವಲ್ಲ :
(1) ಧ್ವನಿ ಸಂಕೇತಗಳ ಅರ್ಥಬದ್ಧ ವ್ಯವಸ್ಥೆ
(2) ಅನುವಂಶೀಯವಾದುದು
(3) ನಿತ್ಯ ಪರಿವರ್ತನಶೀಲವಾದುದು
(4) ಅನುಕರಣಯುಕ್ತವಾದುದು

19. ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳ ಸರಿಯಾದ ಕ್ರಮ :
(A) ಅನುಕರಣ ನಿಯಮ
(B) ಸಿದ್ಧತಾ ನಿಯಮ
(C) ಅಭ್ಯಾಸ ನಿಯಮ
(D) ಪುನರ್ಬಲಗೊಳಿಸುತ್ತಾ ಕಲಿಸುವುದು

ಉತ್ತರಗಳು :
(1) (A), (B), (C), (D)
(2) (B), (A), (C), (D)
(3) (B), (A), (D), (C)
(4) (C), (A), (D), (B)



Use E-Papers, Save Trees

IT



20. ಪ್ರಬಂಧ ಬೋಧನೆಯ ಉದ್ದೇಶ :
(1) ವಿಷಯದ ಗ್ರಹಿಕೆಗಾಗಿ
(2) ಉತ್ತಮ ಮಾತುಗಾರಿಕೆ ಬೆಳೆಸಲು
(3) ಸ್ವ ಅಭಿವ್ಯಕ್ತಿಯನ್ನು ಪೋಷಿಸಿ ಬೆಳೆಸುವುದು
(4) ಸ್ಪರ್ಧೆಗೆ ತಯಾರಿಗೊಳಿಸುವುದು

21. ಭಾಷೆಯ ರಚನೆಯ ನಿಯಮ ಮತ್ತು ಪ್ರಯೋಗವನ್ನು ಕುರಿತು ಅಧ್ಯಯನ ಮಾಡುವುದು :
(1) ಗದ್ಯ ಸಾಹಿತ್ಯ
(2) ಪದ್ಯ ಸಾಹಿತ್ಯ
(3) ಭಾಷಾ ಶಾಸ್ತ್ರ
(4) ವ್ಯಾಕರಣ ಶಾಸ್ತ್ರ

22. ವಿದ್ಯಾರ್ಥಿಗಳು ಕಲಿಯುವ ವಿಷಯಗಳನ್ನು ನಿರಂತರವಾಗಿ ತೂಗಿ ನೋಡಿ ಕಲಿಕೆಯ ಗುಣ ಮತ್ತು ಪರಿಮಾಣವನ್ನು ಗುರುತಿಸಿ ಉತ್ತಮ ಕಲಿಕೆಯ ಕಡೆ ಅವರನ್ನು ನಿರ್ದೇಶಿಸುವುದು :
(1) ಬೋಧನೆ
(2) ಮೌಲ್ಯಮಾಪನ
(3) ಸಂಶೋಧನೆ
(4) ಉತ್ತಮ ಪುಸ್ತಕಗಳು

23. ನಿರ್ದಿಷ್ಟವಾದ ವಿಷಯಗಳಿಂದ ಒಂದು ಸಾಮಾನ್ಯ ತೀರ್ಮಾನದ ಕಡೆ ಸಾಗುವ ಪದ್ಧತಿ :
(1) ನಿಗಮನ ಪದ್ಧತಿ
(2) ಯೋಜನಾ ಪದ್ಧತಿ
(3) ಸಮಗ್ರ ಪದ್ಧತಿ.
(4) ಅನುಗಮನ ಪದ್ಧತಿ

24. "ರೂಪಾಂತರ" ಎಂದರೆ :
(1) ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ವಿಷಯ ಸಾಮಗ್ರಿಯನ್ನು ಕೊಂಡೊಯ್ಯುವುದು
(2) ಒಂದು ಭಾಷೆಯಲ್ಲಿರುವ ಮೂಲಕೃತಿಯನ್ನು ಉದ್ದಿಷ್ಟ ಭಾಷಾ ಕೃತಿಯನ್ನಾಗಿ ಅನುವಾದ ಮಾಡುವುದು
(3) ಒಂದು ಭಾಷೆಯೊಳಗೆ ನಡೆಯುವ ಪರಿವರ್ತನೆ
(4) ಕಾಲ, ದೇಶ, ಸಂಸ್ಕೃತಿಗಳನ್ನು ಪರಿಗಣಿಸದೆ ಒಂದು ಭಾಷೆಯೊಳಗೆ ನಡೆಯುವ ಬದಲಾವಣೆ

25. "ಬೋಧನಾ ಪದ್ಧತಿ" ಎಂದರೆ :
(1) ಕಲಿಕೆಯನ್ನು ಸುಲಭ ಮತ್ತು ಪರಿಣಾಮಕಾರಿ ಮಾಡಲು ಶಿಕ್ಷಕರು ಅನುಸರಿಸುವ ಮಾರ್ಗ
(2) ತರಗತಿಯಲ್ಲಿ ಕಲಿಕಾ ಸಾಮಗ್ರಿಗಳನ್ನು ಬಳಸಿ ಕಲಿಸುವ ಮಾರ್ಗ
(3) ಬೋಧನೆ ಮತ್ತು ಕಲಿಕೆಯಲ್ಲಿ ಪುಸ್ತಕಗಳನ್ನು ಬಳಸುವುದು
(4) ಯಾಂತ್ರಿಕವಾದ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆ



Use E-Papers, Save Trees

IT



26. ವ್ಯಕ್ತಿಯೊಬ್ಬನು ತನ್ನ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳಿಗೆ ತಾನೇ ತಕ್ಷಣ ಪರಿಹಾರ ಕಂಡುಕೊಂಡು, ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕೈಗೊಳ್ಳುವ ವೈಜ್ಞಾನಿಕ ಮಾರ್ಗ :

(1) ಸ್ವಯಂ ಮೌಲ್ಯಮಾಪನ
(2) ನಿರಂತರ ಮೌಲ್ಯಮಾಪನ
(3) ಕ್ರಿಯಾ ಸಂಶೋಧನೆ
(4) ಪಾಠ ಯೋಜನೆ

27. ಮಕ್ಕಳ ಕಲಿಕೆಯಲ್ಲಿ ಕಂಡುಬರುವ ಕೊರತೆಗಳನ್ನು ನಿವಾರಿಸಲು ಶಿಕ್ಷಕರು ಕೈಗೊಳ್ಳುವ ವಿಧಾನ :

(1) ತರಗತಿಯಲ್ಲಿ ಪರಿಣಾಮಕಾರಿಯಾಗಿ ಬೋಧಿಸುವುದು
(2) ಪರಿಹಾರ ಬೋಧನೆಯನ್ನು ಮಾಡುವುದು
(3) ವಿದ್ಯಾರ್ಥಿಗಳಿಂದ ಹೆಚ್ಚು ಅಭ್ಯಾಸಗಳನ್ನು ಮಾಡಿಸುವುದು
(4) ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯಲ್ಲಿ ಪಾಠೋಪಕರಣಗಳನ್ನು ಬಳಸುವುದು

28. ಕಂದ ಪದ್ಯದ ಮೊದಲಾರ್ಧದಲ್ಲಿ ಬರುವ ಮಾತ್ರೆಗಳ ಸಂಖ್ಯೆ :

(1) ಹನ್ನೆರಡು
(2) ಮೂವತ್ತೆರಡು
(3) ಮೂವತ್ತು
(4) ಮೂವತ್ತೈದು

29. "ಹತ್ತು ಬಾರಿ ಓದುವ ಬದಲು ಒಂದು ಬಾರಿ ಬರೆಯುವುದು ಲೇಸು" ಎಂದು ಹೇಳುವುದು ಸರ್ವಸಾಮಾನ್ಯ. ಆದರೆ ಇದರಿಂದ ಬೆಳವಣಿಗೆಯಾಗುವುದು :

(1) ಸ್ಮರಣಶಕ್ತಿ
(2) ಉತ್ತಮ ಬರಹಗಾರಿಕೆ
(3) ಭಾಷಾ ಸಾಮರ್ಥ್ಯ
(4) ಓದುಗಾರಿಕೆ ಸಾಮರ್ಥ್ಯ

30. ಪದ್ಯವನ್ನು ರಾಗವಾಗಿ ಭಾವಪೂರ್ಣವಾಗಿ ಹಾಡುವ ಕ್ರಮವನ್ನು ಅಭ್ಯಾಸ ಮಾಡಿಸುವುದರಿಂದ ವಿದ್ಯಾರ್ಥಿಗಳಲ್ಲಿ ಈ ಸಾಮರ್ಥ್ಯ ಗಟ್ಟಿಯಾಗುತ್ತದೆ :

(1) ಸುಸಂಬದ್ಧ ವಾಕ್ಯರಚನೆ
(2) ಸೃಜನಶೀಲ ಅಭಿವ್ಯಕ್ತಿ
(3) ರಸಾಸ್ವಾದನೆ ಮತ್ತು ಸೌಂದರ್ಯಪ್ರಜ್ಞೆ
(4) ಪದ್ಯವನ್ನು ಗಾಯನ ಮಾಡುವ ಕಲೆ



Use E-Papers, Save Trees

IT



# PART – II

## Language – II

## ENGLISH

**Read the given passage and answer the questions (Q.No. 31 to Q.No. 38) that follow by selecting the most appropriate option**

Today, I Rabindranath Tagore complete eighty years of my life. As I look back on the vast stretch of years that life behind me and seen in clear perspective the history of my early development, I am struck by the change that has taken place both in my own attitude and in the psychology of my countrymen a change that carries within it a cause of profound tragedy. Our direct contact with the larger world of men was linked up with the contemporary history of the English people whom we came to know in those earlier days. It was mainly through their mighty literature that we formed our ideas with regard to these new comers to our Indian shores. In those days the type of learning that was served out to us was neither plentiful nor diverse, nor was the spirit of scientific enquiry very much evident. Thus the scope being strictly limited, the educated of those days had recourse to English Language and Literature. Their days and nights were eloquent with the stately declamations of Burke; with Macaulay's long-rolling sentences : discussions centered upon Shakespeare's drama and Byron's poetry and above all upon the large-hearted liberalism of the nineeth-century English politics.

At the time though tentative attempts were being made to gain our national independence, at heart we had not lost faith in the generosity of the English race. This belief was so firmly rooted in the sentiments of our leaders as to lead them to hope that the victor would of his own grace pave the path of freedom for the vanquished. This belief was based upon the fact that England at the time provided a shelter to all those who had to flee from persecution in their own country. Political martyrs who had suffered for the honour of their people were accorded unreserved welcome at the hands of the English.

I was impressed by this evidence of liberal humanity in the character of the English and thus I was led to set them on the pedastal of my highest respect. This generosity in their national character had not yet been vitiated by imperialist pride. About this time, as a boy in England, I had the opportunity of listening to the speeches of John Bright both in and outside parliament. The large hearted, radical liberalism of those speeches, overflowing all narrow national bounds, had so deep an impression on my mind that something of it lingers even today, even in these days of graceless disillusionment.

31. The synonym for the word 'deep', in the first paragraph is
(1) perspective (2) profound (3) tragedy (4) psychology





Use E-Papers, Save Trees

IT
REDMI NOTE 6 PRO



32. The Indians formed ideas about the Englishmen through
(1) their literature
(2) their advanced weaponry
(3) their scientific enquiry
(4) their administration

33. People who gained from English Literature are
(1) the educated Indians
(2) all the Indians
(3) only writers such as Rabindranath Tagore
(4) indian politicians only

34. In the third paragraph, an antonym for 'Victorians' is
(1) Victor
(2) Vanquished
(3) Belief
(4) Persecution

35. As a boy, Tagore listened to the speeches of
(1) Shakespeare
(2) Byron
(3) John Bright
(4) Macaulay

36. The character of the English that impressed Tagore was
(1) their imperialism
(2) their adamant nature to control people
(3) their limitation to study literature
(4) their humanity

37. Tagore had not lost faith in the generosity of the English at
(1) he believed that they would educate Indians
(2) he believed that they would protect the environment
(3) he believed that they would liberate India
(4) he believed that they would not oppress the people

38. The type of learning that was served out in those days used
(1) plentiful
(2) diverse
(3) did not serve the spirit of scientific enquiry
(4) unlimited and had scope for learning

**Directions : (Q.No. 39 to Q.No. 45)**
**Read the poem given below and answer the questions that follow choosing the best alternative.**

WIND

Wind, come softly
Don't break the shutters of the windows,
Don't scatter the papers
Don't throw down the books on the shelf
There, look what you did – you threw them all down
You tore the pages of the books



Use E-Papers, Save Trees

IT



You brought rain again
You're very clever at poking fun at weaklings
Frail crumbling houses, crumbling doors, crumbling rafter,
Crumbling wood, crumbling bodies, crumbling lives
Crumbling hearts.
The wind god innocent and crushed them all
He won't do what you tell him
So, come, let's build strong homes
Let's joint the doors firmly
Practise to firm the body
Make the heart stead fast
Do this, and the wind will be friends with us
The wind blocked out weak fired
He makes strong fired roar and flourish
His friendship is good
We praise him everyday

**39.** His friendship is good, the figure of speech in this line is
(1) simile (2) metaphor (3) personification (4) synechdoche

**40.** In the first four lines of the poem, the mind
(1) breaks, shatters, scatters papers and throws down books
(2) breaks, shatters, crumbles houses and shuts doors
(3) breaks shatters, crumbles rapters and blows out fires
(4) breaks shatters, crumbles bodies and crushed homes

**41.** We can make friends with the wind by being (Q.No 41 Answer : 3 or 4)
(1) weak (2) adorable (3) friendly (4) strong

**42.** The various tones in the poem are
(1) entreaty, accusation, suggestion, appreciation
(2) entreaty, anger, sorrow, depreciation
(3) request, depreciation, destructive, pain
(4) complaining, anger, poking fun, suggesting

**43.** The number of the line, when the poet stops talking to the wind and starts talking to the readers
(1) 13th line (2) 15th line (3) 6th line (4) 9th line

**44.** The readers can save themselves from the wind by
(1) making themselves strong only physically
(2) making themselves strong both physically and mentally
(3) making themselves strong only emotionally
(4) making themselves strong only mentally





Use E-Papers, Save Trees

IT



45. Finally the poet says, that the wind is a good friend for the readers to have because
(1) he will increase our strength
(2) he will decrease our weakness
(3) he will multiply our friends
(4) he will support to build strong houses

**Answer the questions (Q.No. 46 to Q.No. 60) that follow by selecting the most appropriate option.**

46. The three key features involved in speaking skill are
(1) identifying, understanding, divide sounds
(2) fluency, accuracy, complexity
(3) spelling, punctuation, legibility
(4) phonics, decoding, recognition of letters

47. The ability to generate ideas, sequence the ideas and draft a complete text, are aspects of
(1) Listening skill (2) Speaking skill (3) Reading skill (4) Writing skill

48. The teacher presents 'a word search grid' to learners to identify the words from the grid. This activity helps the learners mainly to
(1) improve their grammar
(2) improve their spelling
(3) improve their speaking skill
(4) improve their listening skill

49. We use cohesive devices to achieve cohesion in a paragraph. One of the following is not a cohesive device
(1) nouns (2) pronouns (3) articles (4) conjunctions

50. It is important to use songs and rhymes for teaching spoken English for beginners, because
(1) it helps the children to understand the meaning of every word in a text
(2) it helps the children to improve grammar aspects
(3) children are worried about understanding the meaning of rhymes
(4) songs and rhymes provide useful words, rhythmic sentences and enjoyment to the learners

51. The teacher shows the pictures along with the words written below. This activity will help the beginners to
(1) develop their listening skill
(2) develop their speaking skill
(3) develop their writing skill
(4) develop their basic vocabulary

52. A summative test is used
(1) at the beginning of a course
(2) at the end of a course
(3) at the beginning and at the end of a course
(4) at the beginning of a new lesson



Use E-Papers, Save Trees

IT



53. The teacher records the spoken performance of the student on a taperecorder and makes him listen to his own voice speaking the target language. This technique will help to improve a students
(1) writing and listening skills
(2) speaking and reading skills
(3) reading and writing skills
(4) listening and speaking skills

54. The definition of a syllable states that
(1) it is a group of words
(2) it is a group of letters
(3) it is a basic speech unit in a word
(4) it has only a consonant sound

55. Learners who are interested in drawing, making models, playing board games are called
(1) Auditory learners
(2) Visual learners
(3) Kinesthetic learners
(4) Tactile learners

56. The teacher gives the instructions to use the words that are in jumbled order and construct meaningful and grammatically correct sentences :

This activity mainly focuses on
(1) Listening skill
(2) Speaking skill
(3) Reading skill
(4) Writing skill

57. Learners are expected to be empowered with rich vocabulary, identify main ideas, know specific details.

These abilities will help them
(1) to develop proficiency in reading
(2) to develop their reference skill
(3) to develop listening skill
(4) to develop their motor skill

58. A remedial teaching class is one that is meant to
(1) only improve a learning skill
(2) only rectify a particular problem area
(3) improve both a learning skill and rectify a particular problem area
(4) identify areas of difficulty

59. The purpose of classroom assessment is to give students the opportunity to
(1) show what they have learnt
(2) show what they have not learnt
(3) understand the performance of their peers
(4) have better interaction with the teacher

60. An example for objective type item to assess a learner is
(1) short answer questions
(2) paragraph editing
(3) multiple choice questions
(4) long answer questions



Use E-Papers, Save Trees

CHILD DEVELOPMENT AND PEDOGOGY

CHILD DEVELOPMENT AND PEDAGOGY

61. ಮಗುವು ಅನುಕರಣೆಯ ಮೂಲಕ ಕಲಿಯುತ್ತದೆ. ಇದು ಪಿಯಾಜೆಯವರ ಬೌದ್ಧಿಕ ಬೆಳವಣಿಗೆಯ ಈ ಹಂತ :

(1) ಸಂವೇದನಾಗತಿ ಹಂತ
(2) ಕಾರ್ಯಪೂರ್ವ ಹಂತ
(3) ಮೂರ್ತ ಕಾರ್ಯ ಹಂತ
(4) ಔಪಚಾರಿಕ ಹಂತ

62. ವಿಕಾಸದ ತತ್ವಗಳ ಜ್ಞಾನವು ಇದಕ್ಕೆ ಉಪಯುಕ್ತವಾದುದು :

(1) ವಿದ್ಯಾರ್ಥಿಗಳನ್ನು ಮುಂದಿನ ಹಂತಕ್ಕೆ ಉತ್ತೀರ್ಣಗೊಳಿಸಲು
(2) ಸಾಮಾನ್ಯ ಪಠ್ಯಕ್ರಮವನ್ನು ರಚಿಸಲು
(3) ಪಠ್ಯೇತರ ಚಟುವಟಿಕೆಗಳನ್ನು ಏರ್ಪಡಿಸಲು
(4) ಸಾಮರ್ಥ್ಯವನ್ನು ಅಂದಾಜಿಸಲು

63. ಈ ಕೆಳಗಿನವುಗಳಲ್ಲಿ ಒಂದನ್ನು ಮಕ್ಕಳು ವಂಶಪಾರಂಪರ್ಯವಾಗಿ ಪಡೆಯುವರು :

(1) ಕೌಶಲಗಳು
(2) ಜ್ಞಾನ
(3) ಮನೋಧೋರಣೆಗಳು
(4) ಅಂತಃಸತ್ವ

64. "ಕೂಟಯುಗ"ದಲ್ಲಿರುವ ಮಗುವು ಕೆಳಗಿನವುಗಳಲ್ಲಿ ಒಂದನ್ನು ವ್ಯಕ್ತಪಡಿಸುತ್ತದೆ :

(1) ಅವನ ಸಮೂಹದ ಸದಸ್ಯರೊಡನೆ ಘರ್ಷಣೆ
(2) ತನ್ನ ಸಮೂಹದತ್ತ ಬದ್ಧತೆ
(3) ಅತಿಯಾದ ಸ್ವಕೇಂದ್ರಿತ ಪ್ರವೃತ್ತಿ
(4) ಭಾವನಾತ್ಮಕ ಸ್ಥಿರತೆ

65. ಜೀನ್ ಪಿಯಾಜೆಯವರ ಪ್ರಕಾರ ನಾಲ್ಕನೇ ತರಗತಿಯ ವಿದ್ಯಾರ್ಥಿಯು ಇದನ್ನು ಮಾಡಲು ಸಾಧ್ಯ :

(1) ಸ್ಥಳಾವಕಾಶ ವ್ಯವಸ್ಥೆ ತೋರಿಸುವುದು
(2) ಪ್ರಾತಿನಿಧಿಕ ಚಿಂತನೆ ಮಾಡುವುದು
(3) ಪ್ರಕಲ್ಪನಾತ್ಮಕ ಚಿಂತನೆ ಮಾಡುವುದು
(4) ವಸ್ತುಗಳನ್ನು ಕ್ರಮಾನುಸಾರ ವರ್ಗೀಕರಿಸುವುದು

66. ಕೋಹ್ಲಬರ್ಗ್‌ರವರು "ನೈತಿಕ ವಿಕಾಸ"ವನ್ನು ವ್ಯಕ್ತಿಯ ಈ ಕೆಳಗಿನ ಪ್ರಜ್ಞೆ ಎಂದಿದ್ದಾರೆ :

(1) ಭೀತಿಯ
(2) ಔದಾರ್ಯದ
(3) ನ್ಯಾಯ ನಿರ್ಣಯದ
(4) ತ್ಯಾಗದ



Use E-Papers, Save Trees

IT



67. ಈ ಕೆಳಗಿನವುಗಳಲ್ಲಿ ಒಂದು ಅಂಶವು ಶಿಶು ಕೇಂದ್ರಿತ ಶಿಕ್ಷಣವನ್ನು ದೃಢಪಡಿಸುವುದಿಲ್ಲ :

(1) ಸಂರಚನಾ ಉಪಕ್ರಮ
(2) ಅನುಭವಾತ್ಮಕ ಉಪಕ್ರಮ
(3) ನಿಗಮನ ಉಪಕ್ರಮ
(4) ಅನುಗಮನ ಉಪಕ್ರಮ

68. "ವಿಕಾಸವು ಶಿಶುವಿನ ಸಾಮಾಜಿಕ ಪರಿಸರದಲ್ಲಿ ಪ್ರಾರಂಭವಾಗುತ್ತದೆ ಮತ್ತು ಆಂತರಿಕವಾಗಿ ತನಗೆ ತಾನೇ ನಿರ್ದೇಶಿಸುತ್ತದೆ" ಎಂಬುದು :

(1) ಪಿಯಾಜೆಯವರ ಸಿದ್ಧಾಂತ
(2) ವೈಗಾಟ್ಸ್ಕಿಯವರ ಸಿದ್ಧಾಂತ
(3) ಬ್ರೂನರ್‌ರವರ ಸಿದ್ಧಾಂತ
(4) ಕೋಹ್ಲಬರ್ಗ್‌ರವರ ಸಿದ್ಧಾಂತ

69. "ಬುದ್ಧಿಶಕ್ತಿಯ ಸಂರಚನೆಯು ಕ್ರಿಯೆಗಳು, ವಿಷಯವಸ್ತು ಮತ್ತು ಉತ್ಪನ್ನಗಳನ್ನು ಒಳಗೊಳ್ಳುತ್ತದೆ" ಇದನ್ನು ಪ್ರತಿಪಾದಿಸಿದವರು :

(1) ಚಾರ್ಲ್ಸ್ ಸ್ಪಿಯರ್‌ಮೆನ್
(2) ಥಾರ್ನ್‌ಡೈಕ್ ಇ.ಎಲ್.
(3) ಥರ್ಸ್ಟನ್ ಎಲ್.ಎಲ್.
(4) ಗಿಲ್‌ಫರ್ಡ್ ಜೆ.ಪಿ.

70. "ಸುಮ ಅವಳ ಸ್ನೇಹಿತೆಯ ದುಃಖವನ್ನು ನಿಖರವಾಗಿ ಅರ್ಥೈಸುತ್ತಾಳೆ ಮತ್ತು ಸಮಾಧಾನ ನೀಡುತ್ತಾಳೆ" ಇಲ್ಲಿ ಸುಮ ತೋರುತ್ತಿರುವುದು :

(1) ಆಧ್ಯಾತ್ಮಿಕ ಬುದ್ಧಿಶಕ್ತಿ
(2) ಸಾಮಾಜಿಕ ಬುದ್ಧಿಶಕ್ತಿ
(3) ಸಂವೇದನಾತ್ಮಕ ಬುದ್ಧಿಶಕ್ತಿ
(4) ನೈತಿಕ ಬುದ್ಧಿಶಕ್ತಿ

71. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಚಿಂತನ ಕ್ರಿಯೆಯನ್ನು ಉದ್ದೀಪನಗೊಳಿಸಲು ಮಾಡಿಸಬಹುದಾದ ಚಟುವಟಿಕೆ :

(1) ಹೇಳಿಕ ರೂಪದ ಲೆಕ್ಕವನ್ನು ಓದುವುದು
(2) ಒಂದು ನಿಸರ್ಗ ದೃಶ್ಯವನ್ನು ವರ್ಣಿಸುವುದು
(3) ಒಂದು ಪದ್ಯವನ್ನು ಪಠಿಸುವುದು
(4) ನಿಯತವಾಗಿ ಕಾಪಿ ಬರೆಯುವುದು

72. ಕೆಳಗಿನ ಯಾವ ಹೇಳಿಕೆ ಸತ್ಯವಲ್ಲ :

(1) ವ್ಯಕ್ತಿ ವ್ಯತ್ಯಾಸಗಳಿಗೆ ಅನುವಂಶೀಯತೆ ಮತ್ತು ಪರಿಸರ ಎರಡೂ ಕಾರಣಗಳು
(2) ಸಮೂಹದ ನಿಯಮಗಳಿಂದ ದೂರ ಸರಿಯುವ ವ್ಯಕ್ತಿಗಳು ಇದ್ದೇ ಇರುತ್ತಾರೆ
(3) ಎಲ್ಲಾ ವಿದ್ಯಾರ್ಥಿಗಳಿಂದ ಏಕರೂಪದ ಯಶಸ್ಸಿನ ಗಳಿಕೆಯನ್ನು ನಿರೀಕ್ಷಿಸಬಹುದು
(4) ಎಲ್ಲಾ ವಿದ್ಯಾರ್ಥಿಗಳೂ ಒಂದೇ ನಿರ್ದಿಷ್ಟ ಬೋಧನಾ ವಿಧಾನದಿಂದ ಲಾಭ ಪಡೆಯಲಾರರು



REDMI NOTE 8 PRO
MI DUAL CAMERA

Use E-Papers, Save Trees

IT



73. "ಶಿಕ್ಷಕರೊಬ್ಬರು ಬಾಲಕರನ್ನು ಅವರ ಜ್ಞಾನಕ್ಕಾಗಿ ಮತ್ತು ಬಾಲಕಿಯರನ್ನು ಅವರ ವಿಧೇಯತೆಗಾಗಿ ಹೊಗಳುತ್ತಾರೆ" – ಈ ಶಿಕ್ಷಕರು :

(1) ಬಾಲಕರು ಮತ್ತು ಬಾಲಕಿಯರನ್ನು ಮೌಲ್ಯಮಾಪನ ಮಾಡುತ್ತಿದ್ದಾರೆ

(2) ಬಾಲಕರು ಮತ್ತು ಬಾಲಕಿಯರನ್ನು ಹೋಲಿಸುತ್ತಿದ್ದಾರೆ

(3) ಮನೆಯಲ್ಲಿ ಕಲಿತ ಲಿಂಗಾಧಾರಿತ ಪಾತ್ರಗಳನ್ನು ಪುನರ್‌ಬಲನಗೊಳಿಸುತ್ತಿದ್ದಾರೆ

(4) ಲಿಂಗಪಕ್ಷಪಾತವಲ್ಲದ ರೀತಿಯಲ್ಲಿ ಹೊಗಳುತ್ತಿದ್ದಾರೆ

74. ಕೆಳಗಿನ ಯಾವುದರ ಸಾಮರ್ಥ್ಯ ಪರೀಕ್ಷೆ ಮಾಡಿ ಮತ್ತು ಹಿಮ್ಮಾಹಿತಿ ಕೊಡುವುದರಿಂದ ಸಮಗ್ರ ಮೌಲ್ಯಮಾಪನವಾಗುವುದು :

(1) ಜ್ಞಾನಾತ್ಮಕ

(2) ಮನೋಚಾಲಿತ

(3) ಸಂವೇಗಾತ್ಮಕ ಮತ್ತು ಮನೋಚಾಲಿತ

(4) ಜ್ಞಾನಾತ್ಮಕ, ಸಂವೇಗಾತ್ಮಕ ಮತ್ತು ಮನೋಚಾಲಿತ

75. ಶಿಕ್ಷಕರೊಬ್ಬರು ತಮ್ಮ ವಿದ್ಯಾರ್ಥಿಗಳನ್ನು ಪ್ರಸಕ್ತ ಪರೀಕ್ಷಾ ವ್ಯವಸ್ಥೆಯನ್ನು ಪರಾಮರ್ಶಿಸಿ ಅವಗುಣಗಳನ್ನು ಹಾಗೂ ಪರಿಹಾರಗಳನ್ನು ಪಟ್ಟಿ ಮಾಡಲು ಕೇಳಿದರು. ಇದು ವಿದ್ಯಾರ್ಥಿಗಳನ್ನು ಹೀಗೆ ಚಿಂತಿಸುವಂತೆ ಮಾಡುತ್ತದೆ :

(1) ಯಾಂತ್ರಿಕವಾಗಿ

(2) ಸೃಜನಶೀಲವಾಗಿ

(3) ವಿಮರ್ಶಾತ್ಮಕವಾಗಿ

(4) ಸೂಕ್ತವಾಗಿ

76. ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ರೂಪಿಸಿರುವ "ಸಮನ್ವಯ ಶಿಕ್ಷಣದ" ಉಪಯುಕ್ತತೆ :

(1) ಮೂಲ ಶಿಕ್ಷಣವನ್ನು ಒದಗಿಸುವುದು

(2) ಸಾಮಾಜಿಕ ಏಕೀಕರಣವನ್ನು ದೃಢಪಡಿಸುವುದು

(3) ಉದಾರತೆಯ ತತ್ವವನ್ನು ಕಾಪಾಡುವುದು

(4) ಸ್ಪರ್ಧಾತ್ಮಕ ಕಲಿಕೆಯನ್ನು ಹೆಚ್ಚಿಸುವುದು

77. "ವಿಶೇಷ ಶಿಕ್ಷಣ"ದ ಶಿಕ್ಷಕರಲ್ಲಿ ನಿರೀಕ್ಷಿಸುವುದು :

(1) ಸಂಪನ್ಮೂಲತೆ ಮತ್ತು ಸ್ನೇಹ

(2) ಶಿಸ್ತುಬದ್ಧತೆ ಮತ್ತು ಶಾಂತತೆ

(3) ಸಂಪನ್ಮೂಲತೆ ಮತ್ತು ಎಚ್ಚರಿಕೆ

(4) ವಿಷಯ ಪ್ರಭುತ್ವ

78. ಒಂದು ಮಗು 69 ಮತ್ತು 96 ರ ನಡುವೆ ಗೊಂದಲಗೊಳ್ಳುತ್ತದೆ. ಈ ಅಸಮರ್ಥತೆಯು ಇದರ ಒಂದು ಲಕ್ಷಣವಾಗಿದೆ :

(1) ಡಿಸ್‌ಲೆಕ್ಸಿಯಾ

(2) ಡಿಸ್‌ಕ್ಯಾಲ್‌ಕುಲಿಯ

(3) ಡಿಸ್‌ಗ್ರಾಫಿಯ

(4) ಡಿಸ್‌ಥಿಮಿಯ



Use E-Papers, Save Trees

IT



79. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಈ ಕೆಳಗಿನ ಶೈಕ್ಷಣಿಕ ಕ್ರಮವನ್ನು ಒದಗಿಸಬಹುದು :
(1) ಸಂಪದೀಕೃತ ಚಟುವಟಿಕೆಗಳು
(2) ಪರಿಹಾರಾತ್ಮಕ ಚಟುವಟಿಕೆಗಳು
(3) ಗುಂಪು ಚಟುವಟಿಕೆಗಳು
(4) ಮೂರ್ತ ಚಟುವಟಿಕೆಗಳು

80. ಮಕ್ಕಳು ಸೃಜನಶೀಲವಾಗಿ ಚಿಂತಿಸುವಂತೆ ಪ್ರೋತ್ಸಾಹಿಸಲು, ಶಿಕ್ಷಕರಿಗೆ ಈ ಕೆಳಗಿನ ಒಂದು ಸಹಾಯ ಮಾಡುವುದಿಲ್ಲ:
(1) ವಿಷಯ ಕ್ಷೇತ್ರಗಳ ನಡುವೆ ಸಂಬಂಧಿಸುವುದು
(2) ಮಾಹಿತಿಯನ್ನು ಕಂಠಪಾಠ ಮಾಡುವುದು
(3) ಮೆದುಳನ್ನು ಕಾರ್ಯಪಟುತ್ವ ಮಾಡುವ ತಂತ್ರ
(4) ವಿದ್ಯಾರ್ಥಿಗಳ ಪ್ರಶ್ನೆಗಳನ್ನು ಪುರಸ್ಕರಿಸುವುದು

81. "ಒಂದು ಮಗು ತನ್ನ ಮನೆಯಿಂದ ಶಾಲೆಗೆ ಇರುವ ರಸ್ತೆ ನಕಾಶೆಯನ್ನು (road map) ಬಿಡಿಸಬಲ್ಲದು" ಬ್ರೂನರ್‌ರವರ ಪ್ರಕಾರ ಈ ಚಿಂತನೆಯು ಹೀಗೆಂದು ಪ್ರತಿನಿಧಿಸುವುದು :
(1) ಕ್ರಿಯಾತ್ಮಕ ಮಾರ್ಗ
(2) ಸಾಂಕೇತಿಕ ಮಾರ್ಗ
(3) ಬಿಂಬಾತ್ಮಕ ಮಾರ್ಗ
(4) ಕಲಾತ್ಮಕ ಮಾರ್ಗ

82. ಮಕ್ಕಳಲ್ಲಿನ ಅಸಮರ್ಪಕವಾದ ವರ್ತನೆಗಳನ್ನು ಇದರ ಮೂಲಕ ತೆಗೆದುಹಾಕಬಹುದು :
(1) ಧನಾತ್ಮಕ ಪುನರ್ಬಲನ
(2) ಋಣಾತ್ಮಕ ಪುನರ್ಬಲನ
(3) ಮೌಲ್ಯಮಾಪನ
(4) ಬಾಹ್ಯ ಪ್ರೇರಣೆ

83. ನಾಲ್ವರು ವಿದ್ಯಾರ್ಥಿಗಳು ಒಬ್ಬ ಶಿಕ್ಷಕರೊಂದಿಗೆ ಒಂದು ಪಠ್ಯಲೇಖನವನ್ನು ಚರ್ಚಿಸುತ್ತಾ ಪರಿಣಾಮಕಾರಿ ಗ್ರಹಣಯುಕ್ತ ಓದುಗಾರಿಕೆಯನ್ನು ತೋರಿದರು. ಇದು ಈ ಕೆಳಗಿನದರ ಉದಾಹರಣೆ :
(1) ಒಳನೋಟಪೂರ್ಣ ಕಲಿಕೆ
(2) ಸಹಕಾರಿ ಕಲಿಕೆ
(3) ಮುಂಸಂಘಟಕಗಳ ಮಾದರಿಯ ಬೋಧನೆ
(4) ಮಾರ್ಗದರ್ಶಿತ ಅನ್ವೇಷಣೆ

84. "ಕಲಿಕಾ ಕೇಂದ್ರಿತ ಶಿಕ್ಷಣ"ವನ್ನು (LCE) ಸೃಷ್ಟಿಸಲು ಶಿಕ್ಷಕನಲ್ಲಿರಬೇಕಾದ ಅತಿಮುಖ್ಯ ಸಾಮರ್ಥ್ಯವು :
(1) ದಾಖಲೆಗಳ ನಿರ್ವಹಣೆ
(2) ಪರೀಕ್ಷೆಗಳನ್ನು ನಡೆಸುವುದು
(3) ಪರಿಣಾಮಕಾರಿ ಮಂಡನಾ/ಪ್ರಸ್ತುತೀಕರಣ ಕೌಶಲಗಳು
(4) ಸಭೆಗಳನ್ನು ಏರ್ಪಡಿಸುವುದು



REDMI NOTE 8 PRO
MI DUAL CAMERA
Use E-Papers, Save Trees

IT



85. ವಿದ್ಯಾರ್ಥಿಗಳಲ್ಲಿ ಅನ್ವೇಷಣಾ ಕಲಿಕೆಯನ್ನು ಉತ್ತೇಜಿಸುವಾಗ, ಶಿಕ್ಷಕರು ಇದನ್ನು ಮಾಡಬಾರದು :

(1) ಪರಿಕಲ್ಪನೆಗೆ ಉದಾಹರಣೆಗಳನ್ನು ನೀಡುವುದು

(2) ವಿದ್ಯಾರ್ಥಿಗಳಿಗೆ ಸಮಸ್ಯೆಯೊಂದನ್ನು ನೀಡುವುದು

(3) ಒಳನೋಟದಿಂದ ಊಹೆಗಳನ್ನು ಮಾಡಲು ಉತ್ತೇಜಿಸುವುದು

(4) ಸಮಸ್ಯೆಯನ್ನು ಹೇಗೆ ಪರಿಹರಿಸುವುದೆಂದು ವಿವರಿಸುವುದು

86. ಅವಮಾನ ಭಾವನೆಯ ಒಂದು ಮಗು ತನ್ನ ಅಲ್ಪ ಸಾಧನೆಗೆ ಕೋಪಗೊಳ್ಳುವುದು ಮತ್ತು ಪೋಷಕರಿಗೆ ನಿರಾಶೆಗೊಳಿಸಿದ್ದಕ್ಕೆ ಕ್ಷಮಾಭಾವನೆಗೊಳಗಾಗುತ್ತದೆ – ಇದು ಸೂಚಿಸುವುದು ಮಗುವಿನ :

(1) ತಾರ್ಕಿಕ ಚಿಂತನೆಯನ್ನು

(2) ಸಂವೇಗಾತ್ಮಕ ಪರಿಪಕ್ವತೆ

(3) ನೈತಿಕ ಪಕ್ವತೆಯನ್ನು

(4) ಕರ್ತವ್ಯದತ್ತ ಅಲಕ್ಷ್ಯವನ್ನು

87. ಕಲಿಕೆಗಾಗಿ ಅಭಿಪ್ರೇರಣೆಯು ಗುರಿಕೇಂದ್ರಿತವಾಗಿರುವುದಕ್ಕೆ ಬದಲಾಗಿ ಕಾರ್ಯಕೇಂದ್ರಿತವಾಗಿರಬೇಕು, ಏಕೆಂದರೆ ಇದು:

(1) ಗಮನವನ್ನು ಬದಲಿಸುತ್ತದೆ

(2) ಉತ್ತಮ ಕಾರ್ಯನಿರ್ವಹಣೆಗೆ ಪ್ರೇರೇಪಿಸುತ್ತದೆ

(3) ಬಹುಮಾನವನ್ನು ಗಳಿಸುತ್ತದೆ

(4) ಇತರರೊಡನೆ ಹೋಲಿಸುತ್ತದೆ

88. ಒತ್ತಡಕ್ಕೊಳಗಾಗಿರುವ ಮಗುವಿಗೆ ಶಿಕ್ಷಕರು ಮತ್ತು ಪೋಷಕರು ಹೀಗೆ ಮಾಡಲು ಸಹಾಯ ಮಾಡಬಹುದು :

(1) ವಿಶ್ರಾಂತಿ ಮತ್ತು ಚಟುವಟಿಕೆಗಳ ನಡುವೆ ಸಮತೋಲನ

(2) ಕೊರತೆಗಳನ್ನು ಕಡೆಗಣಿಸುವುದು

(3) ಸವಾಲುಗಳನ್ನು ಒಪ್ಪಿಕೊಳ್ಳುವುದು

(4) ಕೆಲಸದಿಂದ ಹಿಂದೆಗೆಯುವುದು

89. ಐದನೆಯ ತರಗತಿಯ ವಿದ್ಯಾರ್ಥಿಯು ಓದಲು ಅನುತ್ತೀರ್ಣನಾದಾಗ ಶಿಕ್ಷಕರು ಆಯ್ಕೆ ಮಾಡಬೇಕಾದುದು :

(1) ರೂಪಣಾತ್ಮಕ ಮೌಲ್ಯಮಾಪನ

(2) ಸಂಕಲನಾತ್ಮಕ ಮೌಲ್ಯಮಾಪನ

(3) ಪ್ರಾಜ್ಞಾನಿಕ ಒರೆ

(4) ನೈದಾನಿಕ ಒರೆ

90. "ಶೈಕ್ಷಣಿಕ ಸಾಧನೆಯಲ್ಲಿ ದುರ್ಬಲನಾಗಿರುವ ವಿದ್ಯಾರ್ಥಿ ಉತ್ತಮ ಕ್ರೀಡಾಪಟುವಾಗುತ್ತಾನೆ" – ಇದು ಈ ರಕ್ಷಣಾ ತಂತ್ರಕ್ಕೆ ಉದಾಹರಣೆಯಾಗಿದೆ :

(1) ಪ್ರಕ್ಷೇಪಣೆ

(2) ಪರಿಹಾರ

(3) ತರ್ಕಸಮ್ಮತವಾಗಿಸುವಿಕೆ

(4) ತಾದಾತ್ಮ್ಯ




Use E-Papers, Save Trees

IT




## PART – IV
## MATHEMATICS

91. ಚಿತ್ರದಲ್ಲಿ $\angle CBE = 80^\circ$ ಆದರೆ $\angle ADC$ ಅಳತೆ :




(1) 80°
(2) 100°
(3) 120°
(4) 40°

92. ಕೊಟ್ಟಿರುವ ABC ತ್ರಿಭುಜದಲ್ಲಿ, AB ಮತ್ತು AC ಬಾಹುಗಳನ್ನು ವೃದ್ಧಿಸಿದೆ ಮತ್ತು $AB = AC$ ಆದರೆ, X ಮತ್ತು Y ಗಳ ಸಂಬಂಧ :




(1) $x = y$
(2) $x > y$
(3) $x < y$
(4) $2x = y$

(SPACE FOR ROUGH WORK)

KM



Use E-Papers, Save Trees

**93.** ಒಂದು ಸಮಬಾಹು ತ್ರಿಭುಜದ ವಿಸ್ತೀರ್ಣ $24\sqrt{3}\ cm^2$ ಆದರೆ, ಅದರ ಸುತ್ತಳತೆ :

(1) $8\sqrt{3}$ cm
(2) $72\sqrt{3}$ cm
(3) $12\sqrt{6}$ cm
(4) $16\sqrt{6}$ cm

**94.** ತ್ರಿಜ್ಯ 35 cm ಇರುವ ವೃತ್ತಾಕಾರದ ತಾಮ್ರದ ತಂತಿಯನ್ನು ವರ್ಗಾಕೃತಿಯಲ್ಲಿರುವಂತೆ ಮಾಡಿದಾಗ ಉಂಟಾಗುವ ವರ್ಗದ ಬಾಹುವಿನ ಉದ್ದ :

(1) 35 cm
(2) 55 cm
(3) 70 cm
(4) 220 cm

**95.** ಎರಡು ಗೋಳಗಳ ಘನಫಲಗಳ ಅನುಪಾತ 64:27 ಆದರೆ, ಅವುಗಳ ಮೇಲ್ಮೈ ವಿಸ್ತೀರ್ಣಗಳ ಅನುಪಾತ :

(1) 1 : 2
(2) 2 : 3
(3) 8 : 3
(4) 16 : 9

**96.** 9, 2, $x$, 389 ಸಂಖ್ಯೆಯು 11 ರಿಂದ ಪೂರ್ಣವಾಗಿ ಭಾಗವಾಗಬೇಕಾದರೆ '$x$' ನ ಬೆಲೆ :

(1) 5
(2) 6
(3) 7
(4) 8

(Q.No 96 : Deleted)

**97.** $\dfrac{(856+167)^2+(856-167)^2}{(856\times856)+(167\times167)}$ ಇದರ ಬೆಲೆ :

(1) 1
(2) 2
(3) 689
(4) 754

(SPACE FOR ROUGH WORK)

IT



98. $\frac{a}{3} = \frac{b}{4} = \frac{c}{7}$ ಆದಾಗ $\frac{a+b+c}{c}$ ನ ಬೆಲೆ :

(1) $\frac{1}{\sqrt{7}}$

(2) $\sqrt{2}$

(3) 2

(4) 7

99. ಮೊದಲ 50 ಸ್ವಾಭಾವಿಕ ಸಂಖ್ಯೆಗಳ ಸರಾಸರಿ :


(1) 12.25

(2) 21.25

(3) 25

(4) 25.5

100. ಕೊಟ್ಟಿರುವ ವಿನ್ಯಾಸದಲ್ಲಿ $x$ ನ ಬೆಲೆ :




(1) 18

(2) 20

(3) 30

(4) 40

(SPACE FOR ROUGH WORK)

Use E-Papers, Save Trees

**101.** 20 ವಸ್ತುಗಳ ಅಸಲು ಬೆಲೆಯು '$x$' ವಸ್ತುಗಳ ಮಾರಾಟ ಬೆಲೆಗೆ ಸಮವಾಗಿದೆ. ಲಾಭ 25% ಆದರೆ, '$x$' ನ ಬೆಲೆ :

(1) 16
(2) 17
(3) 18
(4) 20

**102.** $\sqrt{41-\sqrt{21+\sqrt{19-\sqrt{9}}}}$ ಇದರ ಬೆಲೆ :

(1) $\sqrt{30}$
(2) 3
(3) 6
(4) $\sqrt{15}$

**103.** $[(-16)\div 4]\div(-2)$ ಇದರ ಸುಲಭೀಕರಿಸಿದ ರೂಪ :

(1) 2
(2) 4
(3) 6
(4) 8

**104.** 64 $cm^3$ ಘನಫಲವನ್ನು ಹೊಂದಿರುವ ಎರಡು ವರ್ಗ ಘನಗಳ ಮುಖಗಳನ್ನು ಸೇರಿಸಿದಾಗ ಉಂಟಾಗುವ ಆಯತ ಘನಾಕೃತಿಯ ಪೂರ್ಣ ಮೇಲ್ಮೈ ವಿಸ್ತೀರ್ಣ :

(1) 32 $cm^2$
(2) 64 $cm^2$
(3) 96 $cm^2$
(4) 160 $cm^2$

**105.** ಪ್ರತಿ ಗಂಟೆಗೆ 72 ಕಿಲೋಮೀಟರ್ ಜವದಲ್ಲಿ ಚಲಿಸುತ್ತಿರುವ ಒಂದು ರೈಲು 250 m ಉದ್ದದ ಪ್ಲಾಟ್‌ಫಾರಂನ್ನು 26 ಸೆಕೆಂಡ್‌ಗಳಲ್ಲಿ ದಾಟುತ್ತದೆ. ಹಾಗಾದರೆ, ರೈಲಿನ ಉದ್ದ :

(1) 230 m
(2) 240 m
(3) 260 m
(4) 270 m

**(SPACE FOR ROUGH WORK)**

Use E-Papers, Save Trees

IT



106. ಶಿಕ್ಷಕರು ಹೀಗೆ ಕಲಿಸಿದಾಗ ಗಣಿತ ಕಲಿಕೆಯು ಆಸಕ್ತಿದಾಯಕವಾಗುವುದು :

(1) ಪ್ರತಿ ವಿದ್ಯಾರ್ಥಿಗೂ ಗುರಿಯನ್ನು ನಿಗದಿಗೊಳಿಸಿದಾಗ

(2) ಕಲಿವನ್ನು ಕಂಠಪಾಠ ಮಾಡುವುದರ ಬದಲಾಗಿ ಅರ್ಥಪೂರ್ಣವಾಗಿಸಿದಾಗ

(3) ವಿದ್ಯಾರ್ಥಿಗಳ ನಿಯೋಜಿತ ಕಾರ್ಯಗಳನ್ನು ನಿಯಮಿತವಾಗಿ ಪರಿಶೀಲಿಸಿದಾಗ

(4) ವಿದ್ಯಾರ್ಥಿಗಳ ನಿಯಮಿತ ಹಾಜರಾತಿಗಾಗಿ ಒತ್ತಾಯಿಸಿದಾಗ

107. ಒಂದು ಮಗು ಗಣಿತದಲ್ಲಿ ಔಪಚಾರಿಕ ಶಿಕ್ಷಣ ಕ್ರಮಕ್ಕೆ ಒಳಪಡುವ ಮುಂಚೆ :

(1) ಗಣಿತದ ಮಗ್ಗಿಯನ್ನು ಕಂಠಪಾಠ ಮಾಡುತ್ತದೆ

(2) ಮೂರ್ತ ಪ್ರಶ್ನೆಗಳನ್ನು ಕೇಳುತ್ತದೆ

(3) ಮಾನಸಿಕವಾಗಿ ಸಮಸ್ಯೆಗಳನ್ನು ಪರಿಹರಿಸುತ್ತದೆ

(4) ಒಂದು ಪೂರ್ಣವಸ್ತುವಿನ ಗಾತ್ರ ಮತ್ತು ಮುರಿದ ವಸ್ತುಗಳ ಗಾತ್ರಗಳ ವ್ಯತ್ಯಾಸವನ್ನು ಗುರುತಿಸುತ್ತದೆ

108. ಗಣಿತದ ತರಗತಿಯಲ್ಲಿ ಅವಧಾನವನ್ನು ಹೆಚ್ಚಿಸುವ ಒಂದು ಪರಿಣಾಮಕಾರೀ ಮಾರ್ಗವೆಂದರೆ :

(1) ಪಠ್ಯಪುಸ್ತಕದಲ್ಲಿನ ಎಲ್ಲಾ ವಿಷಯಗಳನ್ನೂ ಬೋಧಿಸುವುದು

(2) ವಿದ್ಯಾರ್ಥಿಗಳ ಹಾಜರಾತಿಯನ್ನು ಪರಿಶೀಲಿಸುವುದು

(3) ಗ್ರಹಿಕೆಯನ್ನು ಪರೀಕ್ಷಿಸಲು ಪ್ರಶ್ನೆಗಳನ್ನು ಕೇಳುವುದು

(4) ಶಿಸ್ತನ್ನು ಮೂಡಿಸುವುದು

109. ವಿದ್ಯಾರ್ಥಿಗಳ ಗಣಿತ ಕಲಿಕೆಯಲ್ಲಿನ ಯಶಸ್ಸನ್ನು ನಿರ್ಧರಿಸುವ ಅಂಶ :

(1) ಒಬ್ಬ ವಿದ್ಯಾರ್ಥಿ ಎಷ್ಟು ಸಮಸ್ಯೆಗಳನ್ನು ಪರಿಹರಿಸುತ್ತಾನೆ

(2) ವಿದ್ಯಾರ್ಥಿಗಳು ಪೂರ್ಣಗೊಳಿಸುವ ಪ್ರಕಲ್ಪಗಳು

(3) ಸಮಸ್ಯೆಗಳನ್ನು ಪರಿಹರಿಸುವುದರಲ್ಲಿನ ದಕ್ಷತೆ ಮತ್ತು ಸಾಮರ್ಥ್ಯ

(4) ವಿದ್ಯಾರ್ಥಿಗಳು ಶಿಕ್ಷಕರಿಗೆ ಕೇಳುವ ಪ್ರಶ್ನೆಗಳು

(SPACE FOR ROUGH WORK)

Use E-Papers, Save Trees

**110.** ಗಣಿತದಲ್ಲಿ ಅಭ್ಯಾಸ ಲೆಕ್ಕಗಳನ್ನು ನೀಡುವುದರ ಒಂದು ಮುಖ್ಯ ಪ್ರಯೋಜನ :

(1) ಸಮಸ್ಯೆಗಳನ್ನು ಪರಿಹರಿಸುವ ಕೌಶಲ ಬೆಳೆಸುತ್ತದೆ

(2) ಒಂದು ಸಮಸ್ಯೆಯನ್ನು ಪರಿಹರಿಸುವುದನ್ನು ವೈಯಕ್ತೀಕರಣಗೊಳಿಸುತ್ತದೆ

(3) ವಿದ್ಯಾರ್ಥಿಗಳಿಗೆ ಅಂಕಗಳನ್ನು ಗಳಿಸಲು ಸಹಾಯ ಮಾಡುತ್ತದೆ

(4) ಬುದ್ಧಿಶಕ್ತಿಯನ್ನು ಬೆಳೆಸುತ್ತದೆ

**111.** ಒಬ್ಬ ಶಿಕ್ಷಕರು ಗಣಿತದಲ್ಲಿ ವಿದ್ಯಾರ್ಥಿಗಳು ಗಳಿಸಿದ ಕೌಶಲಗಳಲ್ಲಿನ ಪ್ರಭುತ್ವ, ಮೂಲ ಪರಿಕಲ್ಪನೆಗಳು ಮತ್ತು ಸಾಮಾನ್ಯ ಜ್ಞಾನವನ್ನು ಮಾಪನ ಮಾಡಲು ಬಯಸುತ್ತಾರೆ. ಇದಕ್ಕಾಗಿ ಅವರಿಗೆ ಅತ್ಯುಪಯುಕ್ತವಾದುದು :

(1) ಅಭಿಕ್ಷಮತಾ ಪರೀಕ್ಷೆಗಳು

(2) ಸಾಧನಾ ಪರೀಕ್ಷೆಗಳು

(3) ಪ್ರಮಾಣಬದ್ಧ ಪರೀಕ್ಷೆಗಳು

(4) ನೈದಾನಿಕ ಪರೀಕ್ಷೆಗಳು

**112.** ಗಣಿತದ ಕಲಿಕೆಯಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಮಾಪನಗಳೆರಡಕ್ಕೂ ಅವಕಾಶ ಕಲ್ಪಿಸುವ ಒಂದು ವಿಧಾನ:

(1) ನಲಿ–ಕಲಿ ವಿಧಾನ

(2) ಚೈತನ್ಯ ವಿಧಾನ

(3) ಯೋಜನಾ ವಿಧಾನ

(4) ಅನುಗಮನ ವಿಧಾನ

**113.** ಗಣಿತದ ಕಲಿಕೆಯ ಮಾಪನದಲ್ಲಿ ಒತ್ತು ನೀಡಬೇಕಾಗಿರುವ ಅಂಶ :

(1) ಸಮಸ್ಯೆಯನ್ನು ಪರಿಹರಿಸುವಲ್ಲಿ ಅನುಸರಿಸುವ ಪ್ರಕ್ರಿಯಾ ಸಾಮರ್ಥ್ಯಗಳು

(2) ವಿದ್ಯಾರ್ಥಿಗಳ ಗಣಿತೀಯ ಸಾಮರ್ಥ್ಯಗಳು

(3) ಪರಿಕಲ್ಪನಾತ್ಮಕ ಗ್ರಹಿಕೆ

(4) ಅಂಕಗಳನ್ನು ನೀಡುವುದು

(SPACE FOR ROUGH WORK)

Use E-Papers, Save Trees

IT



114. ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟಿನ ಅನುಸಾರ ಪ್ರಾಥಮಿಕ ಹಂತದಲ್ಲಿನ ಗಣಿತ ಪಠ್ಯಕ್ರಮವು :

(1) ಪರಿಮಾಣಗಳನ್ನು ಮೂರ್ತವಾಗಿ ಅರ್ಥಮಾಡಿಕೊಳ್ಳಲು ಅವಕಾಶ ನೀಡುವುದು

(2) ಸರಳ ವಸ್ತುಗಳ ಹೋಲಿಕೆ ಮತ್ತು ಎಣಿಕೆಗೆ ಒತ್ತು ನೀಡುವುದು

(3) ಅಮೂರ್ತ ಕಲ್ಪನೆಗಳ ಜ್ಞಾನವನ್ನು ಬೆಳೆಸುವುದು

(4) ಜ್ಞಾನಾತ್ಮಕ ಅಂಶಗಳು ಮತ್ತು ಪರಿಕಲ್ಪನೆಗಳನ್ನು ಬೆಳೆಸುವುದು

115. ಪ್ರಾಥಮಿಕ ಹಂತದಲ್ಲಿನ ಗಣಿತ ಬೋಧನೆಗೆ ಸಂಬಂಧಿಸಿದಂತೆ ಶಿಕ್ಷಕರು ಎದುರಿಸುವ ಪ್ರಮುಖ ಸಮಸ್ಯೆ ಎಂದರೆ:

(1) ಅತಿ ಹೆಚ್ಚಿನ ಪಠ್ಯವಸ್ತು

(2) ವಿದ್ಯಾರ್ಥಿಗಳಲ್ಲಿ ವಿಷಯದ ಬಗ್ಗೆ ಇರುವ ಒಂದು ರೀತಿಯ ಭಯ ಮತ್ತು ವೈಫಲ್ಯ

(3) ವಿವಿಧ ಬೋಧನಾ ವಿಧಾನಗಳನ್ನು ಅನುಸರಿಸಲು ಸೂಕ್ತವಾದ ತರಬೇತಿ ಇಲ್ಲದಿರುವುದು

(4) ಗಣಿತದ ಬೋಧನೆಗೆ ಸಾಕಷ್ಟು ಸಂಪನ್ಮೂಲಗಳಿಲ್ಲದಿರುವುದು

116. ತರಗತಿಯಲ್ಲಿ ಘಾತಾಂಕಗಳು ಪಾಠ ಮಾಡುವ ಸಂದರ್ಭದಲ್ಲಿ ಒಬ್ಬ ವಿದ್ಯಾರ್ಥಿಯ ಟಿಪ್ಪಣಿ ಪುಸ್ತಕದಲ್ಲಿ ಈ ರೀತಿ ದಾಖಲಾಗಿದೆ :

$3^2 \times 3^3 = 3^5$

$6^5 \times 6^2 = 6^{10}$

$2^3 \times 3^6 = 6^9$

ಇಲ್ಲಿ ವಿದ್ಯಾರ್ಥಿಯು ವಿಷಯಾಂಶವನ್ನು ಅರ್ಥೈಸುವಲ್ಲಿನ ನ್ಯೂನತೆ :

(1) ಘಾತಾಂಕಗಳ ಸಂಕಲನ ಮತ್ತು ಗುಣಾಕಾರ

(2) ಆಧಾರ ಸಂಖ್ಯೆ ಸಮವಿರುವ ಸಂಖ್ಯೆಗಳನ್ನು ಗುಣಿಸುವುದು

(3) ಆಧಾರ ಸಂಖ್ಯೆ ಬೇರೆ ಬೇರೆಯಿರುವ ಸಂಖ್ಯೆಗಳನ್ನು ಗುಣಿಸುವುದು

(4) ಒಂದೇ ಆಧಾರ ಸಂಖ್ಯೆಯಿರುವ ಘಾತಸಂಖ್ಯೆಯಲ್ಲಿ ಘಾತವನ್ನು ಕೊಡುವುದು

(SPACE FOR ROUGH WORK)

Use E-Papers, Save Trees

117. ಗಣಿತವನ್ನು "ಸಂಕೇತಗಳ ಭಾಷೆ" ಎಂದು ಪರಿಗಣಿಸಿರುವುದರ ಪ್ರಮುಖ ಅನುಕೂಲತೆ :

(1) ವಿಷಯವನ್ನು ಸ್ಪಷ್ಟವಾಗಿ, ನಿಖರವಾಗಿ ಮತ್ತು ಸರಿಯಾಗಿ ಗುರುತಿಸಲು ಸಹಾಯಕ

(2) ವಿವಿಧ ಸಂಕೇತಗಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ

(3) ಇತರ ವಿಷಯಗಳನ್ನು ಅರ್ಥಮಾಡಿಕೊಳ್ಳಲು ತಳಹದಿ ಒದಗಿಸುತ್ತದೆ

(4) ವಿವಿಧ ರೀತಿಯ ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ

118. ಗಣಿತ ಬೋಧನಾ ವಿಧಾನಗಳಲ್ಲಿ "ಪ್ರಾಯೋಗಿಕ ಕ್ರಮದ ಬೋಧನೆ"ಗೆ ಅವಕಾಶ ಒದಗಿಸುವ ವಿಧಾನ :

(1) ಅನುಗಮನ ವಿಧಾನ

(2) ಹ್ಯೂರಿಸ್ಟಿಕ್ ವಿಧಾನ

(3) ಯೋಜನಾ (ಪ್ರಕಲ್ಪ) ವಿಧಾನ

(4) ನಲಿ–ಕಲಿ ವಿಧಾನ

119. ಗಣಿತದಲ್ಲಿ ಒಂದು ನಿರ್ದಿಷ್ಟ ಗುಣ ಸಾಕಷ್ಟು ಸಂದರ್ಭಗಳಲ್ಲಿ ಸರಿಯಾದರೆ, ಅದು ಅಂತಹ ಎಲ್ಲಾ ಸಂದರ್ಭಗಳಲ್ಲೂ ಸರಿಯಾಗಿರುತ್ತದೆ ಎಂಬುದಾಗಿ ತೋರಿಸುತ್ತದೆ. ಈ ರೀತಿಯ ಆಲೋಚನೆ :

(1) ತಾರ್ಕಿಕ ಆಲೋಚನೆ

(2) ಸರಣಿಕ್ರಮ ಆಲೋಚನೆ

(3) ಅನುಗಮನ ಆಲೋಚನೆ

(4) ನಿಗಮನ ಆಲೋಚನೆ

120. ಗಣಿತದಲ್ಲಿ ನಡೆಸುವ ನೈದಾನಿಕ ಪರೀಕ್ಷೆಯ ಒಂದು ಉಪಯೋಗ :

(1) ವಿದ್ಯಾರ್ಥಿಗಳ ಸಾಧನೆಯನ್ನು ತಿಳಿಯಬಹುದು

(2) ಸೂಕ್ತವಾದ ಪ್ರಶ್ನೆಗಳನ್ನು ರೂಪಿಸಬಹುದು

(3) ವಿದ್ಯಾರ್ಥಿಗಳ ನಿರ್ವಹಣೆಯನ್ನು ಮಾಪನ ಮಾಡಬಹುದು

(4) ವಿದ್ಯಾರ್ಥಿಗಳ ಕಲಿಕೆಯಲ್ಲಿನ ದೋಷವನ್ನು ವಿಶ್ಲೇಷಿಸಬಹುದು

(SPACE FOR ROUGH WORK)

Use E-Papers, Save Trees

## PART – V

## ENVIRONMENTAL SCIENCE

121. ಗಾಳಿಯಿಂದಾಗುವ ಪರಾಗಸ್ಪರ್ಶ :

(1) ಎಂಟಮೋಫಿಲಿ (Entamophily)

(2) ಆರ್ನಿಥೋಫಿಲಿ (Ornithophily)

(3) ಅನಿಮೋಫಿಲಿ (Anemophily)

(4) ಕೈರಾಪ್ಟೆರೋಫಿಲಿ (Chiropterophily)

122. ಹಾಲಿನ ಶರ್ಕರ ಹೊಂದಿರುವುದು :

(1) ಗ್ಲುಕೋಸ್ + ಫ್ರುಕ್ಟೋಸ್

(2) ಗ್ಲುಕೋಸ್ + ಗ್ಯಾಲಕ್ಟೋಸ್

(3) ಗ್ಲುಕೋಸ್ + ಗ್ಲುಕೋಸ್

(4) ಗ್ಲುಕೋಸ್ + ರೈಬೋಸ್

123. ಹಾಲನ್ನು ಸಂರಕ್ಷಿಸುವ ಪ್ರಕ್ರಿಯೆ :

(1) ಹುದುಗುವಿಕೆ (Fermentation)

(2) ಪ್ಯಾಶ್ಚರೀಕರಣ (Pasteurisation)

(3) ವಂಧ್ಯೀಕರಣ (Sterilization)

(4) ಏಕರೂಪೀಕರಣ (Homogenisation)

124. ಜೀವಕೋಶೀಯ ಉಸಿರಾಟಕ್ರಿಯೆಯು ಈ ಕಣದಂಶದಲ್ಲಿ ನಡೆಯುತ್ತದೆ :

(1) ರೈಬೋಸೋಮ್

(2) ಮೈಟೋಕಾಂಡ್ರಿಯಾ

(3) ಗಾಲ್ಗೀ ಸಂಕೀರ್ಣ

(4) ರಸದಾನಿ

125. ಈ ಕೆಳಗಿನವುಗಳಲ್ಲಿ ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳು :

(1) ಕಾಗದ, ನೈಲಾನ್ ಮತ್ತು ಚರ್ಮ

(2) ಕಾಗದ, ಪ್ಲಾಸ್ಟಿಕ್ ಮತ್ತು ಹುಲ್ಲು

(3) ಕಾಗದ, ಚರ್ಮ ಮತ್ತು ಹುಲ್ಲು

(4) ಕಾಗದ, ಹುಲ್ಲು ಮತ್ತು ಡಿ.ಡಿ.ಟಿ.



Use E-Papers, Save Trees

IT



**126.** ಸೂಚಕಗಳು ಮತ್ತು ಪ್ರತ್ಯಾಮ್ಲಗಳ ಬಣ್ಣದ ಬದಲಾವಣೆಯ ಸರಿಯಾದ ಹೊಂದಾಣಿಕೆಯನ್ನು ಗುರುತಿಸಿ :

| ಕ್ರ.ಸಂ. | ಸೂಚಕ | | ಪ್ರತ್ಯಾಮ್ಲಗಳಲ್ಲಿ ಬಣ್ಣ |
|---|---|---|---|
| (a) | ಕೆಂಪುಕೋಸು | (i) | ಗುಲಾಬಿ (ಕೆಂಪು) |
| (b) | ಅರಿಶಿಣ | (ii) | ಹಳದಿ |
| (c) | ಮೀಥೈಲ್ ಆರೆಂಜ್ | (iii) | ಕೆಂಪುಮಿಶ್ರಿತ ಕಂದು |
| (d) | ಫಿನಾಪ್ಥಲೀನ್ | (iv) | ಹಸಿರು |

(1) (a)-(iv), (b)-(iii), (c)-(ii), (d)-(i)
(2) (a)-(iv), (b)-(i), (c)-(iii), (d)-(ii)
(3) (a)-(i), (b)-(iv), (c)-(ii), (d)-(iii)
(4) (a)-(ii), (b)-(i), (c)-(iv), (d)-(iii)

**127.** $X$ + ಆಕ್ಸಿಜನ್ $\rightarrow$ $Y$

(ಕಪ್ಪು) (ಬಿಳಿ)

$X$ ಮತ್ತು $Y$ ಗಳನ್ನು ಗುರುತಿಸಿ :

(1) $X - PbS, Y - PbSO_4$
(2) $X - PbSO_4, Y - PbS$
(3) $X - Cu_2O, Y - CuSO_4$
(4) $X - CuSO_4, Y - Cu_2O$

**128.** ನೀರಿನ ಶಾಶ್ವತ ಗಡಸುತನಕ್ಕೆ ಕಾರಣವಾದ ಲವಣಗಳು :

(1) $NaCl, Na_2SO_4$ ಮತ್ತು $CaCl_2, CaSO_4$
(2) $MgCl_2, MgSO_4$ ಮತ್ತು $KCl, K_2SO_4$
(3) $KCl, K_2SO_4$ ಮತ್ತು $CaCl_2, CaSO_4$
(4) $MgCl_2, MgSO_4$ ಮತ್ತು $CaCl_2, CaSO_4$

**129.** ಶಿಲೀಂದ್ರನಾಶಕವನ್ನು ಗುರುತಿಸಿ :

(1) $KNO_3$
(2) $AgNO_3$
(3) $CuSO_4$
(4) $Na_2CO_3$



Use E-Papers, Save Trees

IT



130. $Cl^{-1}$ ನ ಸರಿಯಾದ ಇಲೆಕ್ಟ್ರಾನ್ ವಿನ್ಯಾಸವನ್ನು ಗುರುತಿಸಿ :


(1) K = 2, L = 8, M = 7

(2) K = 2, L = 8, M = 8

(3) K = 2, L = 8, M = 6

(4) K = 2, L = 8, M = 5

131. ವಿದ್ಯುತ್ ಮಂಡಲದಲ್ಲಿನ ಉಪಕರಣದ ಸಂಕೇತವನ್ನು ಗುರುತಿಸಿ :



(1) ಭೂಸ್ಪರ್ಶ ಬಿಂದು (Earth point)

(2) ಫ್ಯೂಸ್ (Fuse)

(3) ವಿದ್ಯುತ್ ಬಲ್ಬ್ (Electric Bulb)

(4) ಬ್ಯಾಟರಿ (Battery)

132. 37°C ಇದಕ್ಕೆ ಸಮ :


(1) 96.8°F

(2) 98.6°F

(3) 95°F

(4) 108°F

133.




ವೇಗಾಪಕರ್ಷಕವನ್ನು (deceleration) ಚಿತ್ರಿಸಿರುವ ನಕ್ಷೆ :

(1) (a) ಮತ್ತು (b)

(2) (b) ಮಾತ್ರ

(3) (c) ಮಾತ್ರ

(4) (b) ಮತ್ತು (c)

KM



Use E-Papers, Save Trees

IT



**134.** ಹೆಚ್ಚಿನ ಚಲನಶಕ್ತಿ ಹೊಂದಿರುವ ಕಾಯ :

(1) ರಾಶಿ = 3 kg, ವೇಗ = 4 $ms^{-1}$

(2) ರಾಶಿ = 5 kg, ವೇಗ = 6 $ms^{-1}$

(3) ರಾಶಿ = 8 kg, ವೇಗ = 2 $ms^{-1}$

(4) ರಾಶಿ = 10 kg, ವೇಗ = 4 $ms^{-1}$

**135.** "ಮೀಟರ್/ಸೆಕೆಂಡ್ ($ms^{-1}$)" ಈ ಕೆಳಗಿನ ಭೌತ ಪರಿಮಾಣಗಳಿಗೆ ಏಕಮಾನವಾಗಿದೆ :

(1) ಜವ ಮತ್ತು ವೇಗೋತ್ಕರ್ಷ

(2) ವೇಗ ಮತ್ತು ಜವ

(3) ವೇಗ ಮತ್ತು ವೇಗೋತ್ಕರ್ಷ

(4) ವೇಗ ಮತ್ತು ಚಲಿಸಿದ ದೂರ

**136.** ರಚನಾವಾದಿ ಪಠ್ಯಕ್ರಮದ ಮೂಲತತ್ವ :

(1) ಜ್ಞಾನರಚನೆ, ಪುನಾರಚನೆಯ ಪ್ರಕ್ರಿಯೆ

(2) ವಿಷಯ ಕೇಂದ್ರಿತ ಪ್ರಕ್ರಿಯೆ

(3) ಸಮುದಾಯ ಕೇಂದ್ರಿತ ಪ್ರಕ್ರಿಯೆ

(4) ಶಿಕ್ಷಕ ಕೇಂದ್ರಿತ ಪ್ರಕ್ರಿಯೆ

**137.** ಅಕ್ಟೋಬರ್ 2 ರಂದು ಗಾಂಧಿಜಯಂತಿಯನ್ನು ಶಾಲಾ ಶಿಕ್ಷಣ ಕಾರ್ಯಚಟುವಟಿಕೆಯಲ್ಲಿ ಸೇರಿಸಿರುವುದರ ಮುಖ್ಯ ಉದ್ದೇಶ NCF – 2005 ರ ಈ ಸೂತ್ರಕ್ಕೆ ಒತ್ತು ನೀಡುತ್ತದೆ :

(1) ಬಾಳಲು ಕಲಿಕೆ

(2) ಕೂಡಿಬಾಳಲು ಕಲಿಕೆ

(3) ಕಲಿಯಲು ಕಲಿಕೆ

(4) ಕೈಗೊಳ್ಳಲು ಕಲಿಕೆ

**138.** ಶಿಕ್ಷಕರು ದ್ರವ್ಯದ ಗುಣಗಳನ್ನು ಕಲಿಕಾಕಾರರೊಂದಿಗೆ ಅನುಕೂಲಿಸುವಾಗ ಗುಂಪು ಚಟುವಟಿಕೆ ಆಯೋಜಿಸಿ ಒಂದು ಗುಂಪಿನವರು ತಮ್ಮ ಕೈಗಳನ್ನು "ಇದು ಮಿಶ್ಮಿ" (Idu-Mishmi) ನೃತ್ಯಗಾರರಂತೆ ಬಂಧಿಸಿರಬೇಕು ಎಂದು ಸೂಚಿಸುತ್ತಾರೆ. ಇದು ವಿಜ್ಞಾನ ಕಲಿಕೆಯ ಈ ವಿಧಾನವಾಗಿದೆ :

(1) ರಚನಾವಾದದ ವಿಧಾನ

(2) ಸಮ್ಮಿಳಿತವಾದದ ವಿಧಾನ

(3) ಸುರುಳಿವಾದದ ವಿಧಾನ

(4) ಪ್ರಾಯೋಗಿಕ ವಿಧಾನ



Use E-Papers, Save Trees

IT



139. ಹೇಳಿಕೆ : (A) : ಕಲಿಕೆ ಹೊರೆಯಾಗಿರುವುದು ನಾವು ಶಿಕ್ಷಣದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಹಾಗೂ ಗುಣಾತ್ಮಕತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಪ್ಪಿದ್ದೇವೆ ಎಂಬುದಕ್ಕೆ ಸಾಕ್ಷಿ.

ಕಾರಣ : (R) : ಇದನ್ನು ಸರಿಪಡಿಸಲು NCF-2005 ರ ಮಾರ್ಗದರ್ಶಿ ತತ್ವಗಳು ಪರಿಹಾರ.

(1) (A) ಮತ್ತು (R) ಎರಡೂ ಸರಿಯಾಗಿವೆ. (A) ಗೆ (R) ಸರಿಯಾದ ವಿವರಣೆ

(2) (A) ಮತ್ತು (R) ಎರಡೂ ಸರಿಯಾಗಿವೆ. ಆದರೆ, (A) ಗೆ (R) ಸರಿಯಾದ ವಿವರಣೆಯಲ್ಲ.

(3) (A) ತಪ್ಪು, (R) ಸರಿ.

(4) (A) ಸರಿ, (R) ತಪ್ಪು

140. "ಒಂದು ಮಾಹಿತಿಯನ್ನು ಸ್ವೀಕರಿಸುವವರ ವರ್ತನೆಯಲ್ಲಿ ಮಾರ್ಪಾಡು ತರಲು ಸಂವಹನಕಾರರನು ಶಾಬ್ದಿಕ ಸಂಕೇತಗಳನ್ನು ಕಳುಹಿಸುವ ಪ್ರಕ್ರಿಯೆಯೇ ಸಂವಹನ :

ಈ ಹೇಳಿಕೆಯನ್ನು ನೀಡಿದವರು :

(1) ರಾಬರ್ಟ್ ಗೋಯರ್
(2) ಹ್ಯಾವಿ ಲ್ಯಾಂಡ್
(3) ಕೋಹ್ಲರ್
(4) ವೈಗೋಟ್‌ಸ್ಕಿ

141. ಮಿಶ್ರಲೋಹಗಳ ಬಗ್ಗೆ ತರಗತಿಯಲ್ಲಿ ಸುಗಮಕಾರರು ಕಲಿಕೆಯನ್ನು ಅನುಕೂಲಿಸುವಾಗ ದೆಹಲಿಯ ಕುತುಬ್ ಮಿನಾರ್ ಬಳಿ ಇರುವ 1600 ವರ್ಷಗಳಷ್ಟು ಹಳೆಯ ಲೋಹದ ಸ್ಥಂಭವನ್ನು ಪರಿಚಯಿಸುತ್ತಾರೆ. ಇದರಿಂದ ಸುಗಮಕಾರರು ಮಗುವಿನಲ್ಲಿ ಈ ಕೆಳಗಿನ ಮೌಲ್ಯವನ್ನು ಬೆಳಸಲು ಪ್ರೇರೇಪಿಸುತ್ತಿದ್ದಾರೆ :

(1) ಬೌದ್ಧಿಕ ಮೌಲ್ಯ
(2) ಪಾರಿಸಾರಿಕ ಮೌಲ್ಯ
(3) ಚಾರಿತ್ರಿಕ ಮೌಲ್ಯ
(4) ಪ್ರಕ್ರಿಯಾ ಮೌಲ್ಯ

142. ಬಳ್ಳಿಗಳ ನಿರ್ದೇಶಾತ್ಮಕ ಚಲನೆಯ ಪರಿಕಲ್ಪನೆಯನ್ನು ಮೌಲ್ಯಮಾಪನ ಮಾಡಲು ಅತ್ಯಂತ ಹೆಚ್ಚು ಸೂಕ್ತವಾದ ವಿಧಾನ :

(1) ಕಾಗದ–ಲೇಖನಿ ಪರೀಕ್ಷೆ
(2) ಚಿತ್ರ ರಚನೆ
(3) ನೇರಾನುಭವ (Hands on) ಚಟುವಟಿಕೆ
(4) ಬಳ್ಳಿಗಳ ಛಾಯಾಚಿತ್ರಗಳ ಸಂಗ್ರಹ

KM



Use E-Papers, Save Trees

143. ಪಠ್ಯವಿಷಯಗಳ ಮೌಲ್ಯಮಾಪನದಲ್ಲಿ ಕೆಳಗಿನ ಯಾವುದು ತಂತ್ರಗಳಲ್ಲ :

(a) ಮೌಖಿಕ ಪರೀಕ್ಷೆ

(b) ಯೋಜನಾ ಕಾರ್ಯ

(c) ಅವಲೋಕನಾ ಪಟ್ಟಿ

(d) ಅಭ್ಯಾಸ ಪ್ರಶ್ನೆಗಳು

(1) (a) ಮತ್ತು (c) (2) (a) ಮತ್ತು (d)

(3) (c) ಮತ್ತು (d) (4) (b) ಮತ್ತು (d)

144. ವಿಜ್ಞಾನ ವಸ್ತು ಪ್ರದರ್ಶನವೊಂದರಲ್ಲಿ ವಿದ್ಯಾರ್ಥಿಯೊಬ್ಬನು ಆಕಸ್ಮಿಕವಾಗಿ ಆಮ್ಲವನ್ನು ಕೈ ಮೇಲೆ ಚೆಲ್ಲಿಕೊಂಡನು. ತಕ್ಷಣ ಆತನ ಸ್ನೇಹಿತರು ಗಾಯಗೊಂಡ ಭಾಗಕ್ಕೆ ಬೇಕಿಂಗ್ ಸೋಡವನ್ನು ಸವರಿ ವೈದ್ಯರಲ್ಲಿಗೆ ಕೊಂಡೊಯ್ದರು. ಇದು :

(1) ಸೌಂದರ್ಯ ಮೌಲ್ಯ (2) ಬೌದ್ಧಿಕ ಮೌಲ್ಯ

(3) ಪ್ರಕ್ರಿಯಾ ಮೌಲ್ಯ (4) ನೈತಿಕ ಮೌಲ್ಯ

145. ಜೀವಕೋಶ ಎಂಬ ಪರಿಕಲ್ಪನೆಯನ್ನು ಅನುಕೂಲಿಸುವಾಗ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಕ್ಷ್ಮದರ್ಶಕದಲ್ಲಿ ಜೀವಕೋಶವನ್ನು ನೋಡಲು ತಿಳಿಸಿ, ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾರೆ :

(a) ಜೀವಕೋಶ ಬರಿಗಣ್ಣಿಗೆ ಕಾಣುತ್ತದೆಯೇ?

(b) ಜೀವಕೋಶವನ್ನು ವೀಕ್ಷಿಸಲು ನೀವು ಬಳಸುತ್ತಿರುವ ಉಪಕರಣದ ಹೆಸರೇನು?

(c) ಸಸ್ಯ ಮತ್ತು ಪ್ರಾಣಿಜೀವಕೋಶಗಳ ಆಕಾರ ಒಂದೇ ರೀತಿಯಾಗಿದೆಯೇ?

ಈ ಕೆಳಗಿನ ಯಾವ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಶಿಕ್ಷಕರು ಪ್ರಯತ್ನಿಸುತ್ತಿದ್ದಾರೆ :

(1) ವೀಕ್ಷಣಾ ಕೌಶಲ ಮತ್ತು ಭಾವನಾತ್ಮಕ ಕೌಶಲ

(2) ವರ್ಗೀಕರಣ ಮತ್ತು ಭಾವನಾತ್ಮಕ ಕೌಶಲ

(3) ವೀಕ್ಷಣಾ ಮತ್ತು ವರ್ಗೀಕರಣ ಕೌಶಲ

(4) ಭಾವನಾತ್ಮಕ ಕೌಶಲ ಮತ್ತು ಚಿತ್ರರಚನಾ ಕೌಶಲ





Use E-Papers, Save Trees

IT



146. ಪರಿಸರ ವಿಜ್ಞಾನ ಪಠ್ಯಪುಸ್ತಕವನ್ನು ಚಟುವಟಿಕಾಧಾರಿತವಾಗಿ ರೂಪಿಸಲು ಉದ್ದೇಶಿಸಲಾದ ಮುಖ್ಯ ಆಶಯ :

(1) ಪರಿಸರ ವಿಜ್ಞಾನವನ್ನು ವಿಷಯವಾಗಿ ಅರಿತುಕೊಳ್ಳಲು
(2) ವೈಯಕ್ತಿಕ ನೆಲೆಯಲ್ಲಿ ಸಂಬಂಧೀಕರಿಸಲು
(3) ಪ್ರತ್ಯೇಕ ವಿಷಯವಾಗಿ ಅರ್ಥೈಸಲು
(4) ರೂಪಣಾತ್ಮಕ ಮೌಲ್ಯಮಾಪನ ನಡೆಸಲು

147. ರೂಪಣಾತ್ಮಕ ಮೌಲ್ಯಮಾಪನವು :

(a) ನೈದಾನಿಕ ಪರೀಕ್ಷೆಗಳನ್ನು ಒಳಗೊಂಡಿದೆ
(b) ರಸಪ್ರಶ್ನೆ ಮತ್ತು ಗೃಹಕಾರ್ಯಗಳನ್ನು ಒಳಗೊಂಡಿದೆ
(c) ಯೋಜನಾಕಾರ್ಯ ಮತ್ತು ನಿಯೋಜಿತ ಕಾರ್ಯಗಳನ್ನು ಒಳಗೊಂಡಿದೆ
(d) ಸೆಮಿಸ್ಟರ್ ಅವಧಿಯ ಕೊನೆಯಲ್ಲಿ ಕಿರುಪರೀಕ್ಷೆಯನ್ನು ಒಳಗೊಂಡಿದೆ

(1) (a), (b) ಮತ್ತು (d)
(2) (a), (c) ಮತ್ತು (d)
(3) (a) ಮತ್ತು (d)
(4) (a), (b) ಮತ್ತು (c)

148. ನಾಲ್ಕನೇ ತರಗತಿಯ ಪರಿಸರ ಅಧ್ಯಯನದ ಪಠ್ಯಪುಸ್ತಕದಲ್ಲಿ ಪರಿಕಲ್ಪನೆಯ ವಿವರಣೆಯ ನಂತರ ಪ್ರಶ್ನೆಗಳನ್ನು ಮತ್ತು ಉತ್ತರಿಸಲು ಖಾಲಿ ಜಾಗವನ್ನು ಪಠ್ಯಪುಸ್ತಕದಲ್ಲಿ ನೀಡಲಾಗಿದೆ. ಇದು ಖಾತ್ರಿಪಡಿಸುವುದು :

(1) ರೂಪಣಾತ್ಮಕ ಮೌಲ್ಯಮಾಪನ
(2) ಸಂಕಲನಾತ್ಮಕ ಮೌಲ್ಯಮಾಪನ
(3) ನೈದಾನಿಕ ಮೌಲ್ಯಮಾಪನ
(4) ಸಾಧನ ಪರೀಕ್ಷೆ

149. ಟ್ರಾಫಿಕ್ ಸಿಗ್ನಲ್‌ಗಳ ಅನುಕೂಲಿಸುವಿಕೆಯ ನಂತರ ವಿದ್ಯಾರ್ಥಿಯೊಬ್ಬ ಝೀಬ್ರಾ ಕ್ರಾಸಿಂಗ್ ಅನ್ನು ವೀಕ್ಷಿಸುತ್ತಾನೆ ಹಾಗೂ ಸಿಗ್ನಲ್ ದೀಪಗಳು ಮತ್ತು ಝೀಬ್ರಾಕ್ರಾಸಿಂಗ್‌ಗಳ ನಡುವಣ ಸಂಬಂಧವನ್ನು ಕಂಡುಕೊಳ್ಳುತ್ತಾನೆ. 5E ಬೋಧನಾ ವಿಧಾನದಲ್ಲಿನ ಸರಿಯಾದ 'E' ಯನ್ನು ಗುರುತಿಸಿ :

(1) ಮೌಲ್ಯಮಾಪನ ಮಾಡು (Evaluate)
(2) ವಿವರಿಸು (Explain)
(3) ತೊಡಗಿಸಿಕೊಳ್ಳು (Engage)
(4) ವಿಸ್ತರಿಸು (Elaborate)

150. ಪ್ರಯೋಗದ ನಂತರ, ವಿದ್ಯಾರ್ಥಿಗಳ ಗುಂಪೊಂದು ಪ್ರಯೋಗದ ಮೇಜನ್ನು ಸ್ವಚ್ಛಗೊಳಿಸುತ್ತಾರೆ ಮತ್ತು ಪ್ರಾಯೋಗಿಕ ಉಪಕರಣಗಳನ್ನು ಅವುಗಳ ನಿಗದಿತ ಸ್ಥಳದಲ್ಲಿ ವ್ಯವಸ್ಥಿತವಾಗಿ ಜೋಡಿಸುತ್ತಾರೆ. ಇದು ತೋರಿಸುವುದೇನೆಂದರೆ :

(1) ಬೌದ್ಧಿಕ ಮೌಲ್ಯ
(2) ನೈತಿಕ ಮೌಲ್ಯ
(3) ಸೌಂದರ್ಯ ಮೌಲ್ಯ
(4) ಪ್ರಕ್ರಿಯಾ ಮೌಲ್ಯ



Use E-Papers, Save Trees

## REVISED KEYANSWERS OF KARNATAKA TEACHERS ELIGIBILITY TEST - 2018

OFFICIAL KEY ANSWERS - (KARTET-2018 PAPER-I KM)

## REVISED KEY ANSWERS OF PAPER-1

| KARNATAKA TEACHERS ELIGIBILITY TEST-2018 | | | | | | | | |
|---|---|---|---|---|---|---|---|---|
| Part-1 - Paper-1: Langauage - 1 Revised Key Answers | | | | | | | | |
| Q. No | Kannada | English | Urdu | Tamil | Telugu | Marathi | Hindi | Sankskrit |
| 1 | 4 | 2 | 3 | 1 | 3 | 3 | 4 | 2 |
| 2 | 4 | 3 | 3 | 2 | 4 | 2 | 2 | 3 |
| 3 | 2 | 1 | 4 | 1 | 2 | 2 | 3 | 2 |
| 4 | 1 | 2 | 1 | 3 | 3 | 4 | 4 | 2 |
| 5 | 3 | 2 | 3 | 1 | 1 | 4 | 1 | 3 |
| 6 | 4 | 2 | 3 | 3 | 3 | 2 | 3 | 2 |
| 7 | 2 | 1 | 3 | 1 | 1 | 1 | 1 | 2 |
| 8 | 3 | 3 | 4 | 2 | 4 | 3 | 3 | 4 |
| 9 | 4 | 3 | 2 | 1 | 3 | 3 | 3 | 3 |
| 10 | 2 | 1 | 2 | 3 | 2 | 1 | 2 | 1 |
| 11 | 4 | 2 | 1 | 1 | 1 | 2 | 1 | 4 |
| 12 | 2 | 3 | 3 | 2 | 2 | 4 | 1 | 2 |
| 13 | 1 | 4 | 3 | 3 | 4 | 2 | 4 | 3 |
| 14 | 2 | 2 | 4 | 2 | 4 | 4 | 2 | 2 |
| 15 | 4 | 4 | 2 | 1 | 1 | 1 | 3 | 3 |
| 16 | 4 | 2 | 3 | 4 | 2 | 3 | 1 | 2 |
| 17 | 1 | 4 | 2 | 1 | 1 | 2 | 3 | 4 |
| 18 | 2 | 4 | 2 | 2 | 3 | 1 | 4 | 4 |
| 19 | 2 | 3 | 2 | 1 | 1 | 4 | 3 | 1 |
| 20 | 3 | 2 | 1 | 1 | 4 | 1 | 1 | 2 |
| 21 | 4 | 3 | 3 | 3 | 4 | 3 | 1 | 3 |
| 22 | 2 | 3 | 3 | 1 | 2 | 2 | 2 | 4 |
| 23 | 4 | 3 | 1 | 4 | 1 | 4 | 4 | 3 |
| 24 | 3 | 4 | 2 | 4 | 1 | 3 | 2 | 2 |
| 25 | 1 | 3 | 4 | 2 | 2 | 1 | 2 | 4 |
| 26 | 3 | 2 | 1 | 3 | 3 | 4 | 2 | 2 |
| 27 | 2 | 1 | 3 | 2 | 3 | 3 | 3 | 3 |
| 28 | 2 | 4 | 3 | 3 | 4 | 1 | 1 | 1 |
| 29 | 1 | 2 | 3 | 4 | 1 | 3 | 3 | 4 |
| 30 | 3 | 2 | 2 | 2 | 4 | 1 | 4 | 2 |

| KARNATAKA TEACHERS ELIGIBILITY TEST -2018 | | | | | | | | |
|---|---|---|---|---|---|---|---|---|
| Part-II - Paper-1: Langauage - II Revised Key Answers | | | | | | | | |
| Q. No | Kannada | English | Urdu | Tamil | Telugu | Marathi | Hindi | Sankskrith |
| 31 | 4 | 2 | 2 | 4 | 3 | 4 | 1 | 3 |
| 32 | 3 | 1 | 3 | 1 | 4 | 1 | 2 | 1 |
| 33 | 2 | 1 | 4 | 1 | 4 | 2 | 3 | 2 |
| 34 | 1 | 2 | 3 | 2 | 2 | 3 | 1 | 4 |
| 35 | 1 | 3 | 3 | 3 | 2 | 1 | * | 2 |
| 36 | 4 | 4 | 2 | 4 | 1 | 3 | 1 | 4 |
| 37 | 4 | 3 | 3 | 1 | 1 | 2 | 1 | 2 |
| 38 | 2 | 3 | 4 | 2 | 3 | 4 | 1 | 2 |
| 39 | 2 | 3 | 3 | 1 | 1 | 3 | 3 | 3 |
| 40 | 4 | 1 | 1 | 2 | 3 | 1 | 4 | 1 |
| 41 | 4 | ** | 3 | 1 | 2 | 2 | 3 | 3 |
| 42 | 2 | 1 | 2 | 2 | 1 | 4 | 1 | 4 |
| 43 | 2 | 1 | 3 | 2 | 4 | 1 | 3 | 3 |
| 44 | 1 | 2 | 2 | 1 | 2 | 3 | 2 | 2 |
| 45 | 3 | 1 | 2 | 2 | 3 | 4 | 4 | 4 |
| 46 | 2 | 2 | 3 | 1 | 2 | 3 | 1 | 1 |
| 47 | 1 | 4 | 1 | 3 | 2 | 2 | 1 | 1 |
| 48 | 4 | 2 | 3 | 1 | 1 | 4 | 3 | 3 |
| 49 | 2 | 1 | 4 | 4 | 2 | 3 | 3 | 4 |
| 50 | 4 | 4 | 2 | 2 | 1 | 1 | 2 | 2 |
| 51 | 3 | 4 | 3 | 4 | 2 | 2 | 1 | 3 |
| 52 | 2 | 2 | 1 | 1 | 3 | 4 | 1 | 4 |
| 53 | 1 | 4 | 2 | 3 | 4 | 1 | 1 | 2 |
| 54 | 4 | 3 | 4 | 4 | 4 | 4 | 3 | 3 |
| 55 | 1 | 4 | 3 | 1 | 1 | 1 | 2 | 4 |
| 56 | 4 | 4 | 3 | 3 | 2 | 3 | 2 | 2 |
| 57 | 1 | 1 | 4 | 4 | 3 | 4 | 1 | 1 |
| 58 | 2 | 3 | 3 | 1 | 4 | 2 | 2 | 2 |
| 59 | 4 | 1 | 4 | 2 | 2 | 3 | 2 | 1 |
| 60 | 3 | 3 | 4 | 4 | 1 | 2 | 3 | 3 |

**Note: * - Question no. 35 in hindi language is not considered.**

****- key answer for question no. 41 in English language is option 3 or 4 .**

# KARNATAKA TEACHERS ELIGIBILITY TEST -2018

## Part-III, IV, V - Paper-1: Child Psychology, Pedagogy, Mathematics & EVS

## Revised Key Answers (Kannada medium)

| Q. No | Child Psychology & Pedagogy | Q. No | Mathematics | Q. No | EVS |
|---|---|---|---|---|---|
| 61 | 2 | 91 | 1 | 121 | 3 |
| 62 | 4 | 92 | 1 | 122 | 2 |
| 63 | 4 | 93 | 3 | 123 | 2 |
| 64 | 2 | 94 | 2 | 124 | 2 |
| 65 | 4 | 95 | 4 | 125 | 3 |
| 66 | 3 | 96 | * | 126 | 1 |
| 67 | 3 | 97 | 2 | 127 | 1 |
| 68 | 2 | 98 | 3 | 128 | 4 |
| 69 | 4 | 99 | 4 | 129 | 3 |
| 70 | 3 | 100 | 2 | 130 | 2 |
| 71 | 2 | 101 | 1 | 131 | 2 |
| 72 | 3 | 102 | 3 | 132 | 2 |
| 73 | 3 | 103 | 1 | 133 | 3 |
| 74 | 4 | 104 | 4 | 134 | 2 |
| 75 | 3 | 105 | 4 | 135 | 2 |
| 76 | 2 | 106 | 2 | 136 | 1 |
| 77 | 3 | 107 | 4 | 137 | 2 |
| 78 | 1 | 108 | 3 | 138 | 2 |
| 79 | 1 | 109 | 3 | 139 | 1 |
| 80 | 2 | 110 | 2 | 140 | 2 |
| 81 | 3 | 111 | 2 | 141 | 3 |
| 82 | 2 | 112 | 1 | 142 | 3 |
| 83 | 2 | 113 | 2 | 143 | 3 |
| 84 | 3 | 114 | 4 | 144 | 4 |
| 85 | 4 | 115 | 3 | 145 | 3 |
| 86 | 2 | 116 | 4 | 146 | 2 |
| 87 | 2 | 117 | 1 | 147 | 4 |
| 88 | 1 | 118 | 3 | 148 | 1 |
| 89 | 4 | 119 | 3 | 149 | 4 |
| 90 | 2 | 120 | 4 | 150 | 3 |

**Note: * - Question no. 96 in Mathematics is not considered.**